ಗ್ರಾಮ ಪಂಚಾಯಿತಿಗಳನ್ನು ಒಳಗೊಂಡಂತೆ ಪಂಚಾಯತ್ ರಾಜ್ ಸಂಸ್ಥೆಗಳ ಸದಸ್ಯರ ಅವಧಿಯು, ಅವುಗಳ ಮೊದಲ ಸಭೆಗಾಗಿ ಗೊತ್ತುಪಡಿಸಿದ ದಿನಾಂಕದಿಂದ 5 ವರ್ಷಗಳ ಅವಧಿಯವರೆಗೆ ಅಸ್ತಿತ್ವದಲ್ಲಿದ್ದು, 5 ವರ್ಷಗಳು ಮುಗಿದ ನಂತರದ ದಿನಾಂಕದಿಂದ ಗ್ರಾಮ ಪಂಚಾಯಿತಿಯ ಅವಧಿಯು ಮುಕ್ತಾಯಗೊಳ್ಳಲಿದ್ದು, ಈ ಹಿಂದೆ 2020-2025 ನೇ ಸಾಲಿಗೆ ರಚಿತವಾಗಿದ್ದ ರಾಜ್ಯದ ಗ್ರಾಮ ಪಂಚಾಯಿತಿಗಳ ಅವಧಿಯು 2026 ನೇ ಜನವರಿ, ಫೆಬ್ರವರಿ, ಮಾರ್ಚ್ ಹಾಗೂ ಮುಂದಿನ ತಿಂಗಳುಗಳ

ವಿವಿಧ ದಿನಾಂಕಗಳಂದು ಮುಕ್ತಾಯಗೊಳ್ಳಲಿದ್ದು, 2026-2031 ರ ಅವಧಿಗಾಗಿ ಗ್ರಾಮ ಪಂಚಾಯಿತಿಗಳಿಗೆ ಚುನಾವಣೆ ನಡೆದು ಗ್ರಾಮ ಪಂಚಾಯಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆ ನಡೆಯುವ ದಿನಾಂಕದವರೆಗೆ ಸದರಿ ಗ್ರಾಮ ಪಂಚಾಯಿತಿಗಳಿಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 8(iii) ರನ್ವಯ ಆಡಳಿತಾಧಿಕಾರಿಗಳನ್ನು ನೇಮಿಸಲು ಉಲ್ಲೇಖ(1) ರ ಪತ್ರದಲ್ಲಿ ನಿರ್ದೇಶಿಸಲಾಗಿರುತ್ತದೆ.

ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 41 ಮತ್ತು 42 ರಂತೆ ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಅವಧಿ ಪೂರ್ಣಗೊಂಡ ಗ್ರಾಮಪಂಚಾಯ್ತಿಗಳಿಗೆ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 1993ರ ಕಲಂ 8 ರನ್ವಯ ಈ ಕೆಳಕಂಡ ಗ್ರಾಮಪಂಚಾಯ್ತಿಗಳ ಮುಂದೆ ತೋರಿಸಿರುವ ಅಧಿಕಾರಿಯನ್ನು " ಆಡಳಿತಾಧಿಕಾರಿ " ಯಾಗಿ ನೇಮಕ ಮಾಡಿ ಅಧಿಸೂಚನೆ ಹೊರಡಿಸಿದೆ.

ಮೂಡಿಗೆರೆ: ತಾಲ್ಲೂಕು

ಕ್ರ. ಸಂ	ಆಡಳಿತಾಧಿಕಾರಿಯಾಗಿ ನೇಮಕ ಮಾಡಿದ ಅಧಿಕಾರಿಯ ಹೆಸರು/ಹುದ್ದೆ	ದೂರವಾಣಿ ಮೊಬೈಲ್ ಸಂಖ್ಯೆ	ಗ್ರಾಮ ಪಂಚಾಯಿತಿಯ ಹೆಸರು	ಅವಧಿ ಮುಗಿದ/ ಮುಗಿಯುವ ದಿನಾಂಕ
1	ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಮೂಡಿಗೆರೆ.	9480495887	ಸುಂಕಸಾಲೆ	06-06-2026
			ಜಾವಳಿ	01-02-2026
2	ಸಮಾಜ ಕಲ್ಯಾಣಾಧಿಕಾರಿ ಗ್ರೇಡ್-2, ಸಮಾಜ ಕಲ್ಯಾಣ ಇಲಾಖೆ, ಮೂಡಿಗೆರೆ	9945558846	ಬಾಳೂರು	31-01-2026
			ನಿಡುವಾಳೆ	02-02-2026
3	ಸಹಾಯಕ ಕಾರ್ಯಪಾಲಕ ಅಭಿಯಂತರರು, ಮೆಸ್ಕಾಂ ಮೂಡಿಗೆರೆ	9448289510	ಕೂವೆ	02-02 2026
			ಕುಂದೂರು	05-08-2026

ಕ್ರ. ಸಂ	ಆಡಳಿತಾಧಿಕಾರಿಯಾಗಿ ನೇಮಕ ಮಾಡಿದ ಅಧಿಕಾರಿಯ ಹೆಸರು/ಹುದ್ದೆ	ದೂರವಾಣಿ ಮೊಬೈಲ್ ಸಂಖ್ಯೆ	ಗ್ರಾಮ ಪಂಚಾಯಿತಿಯ ಹೆಸರು	ಅವಧಿ ಮುಗಿದ/ ಮುಗಿಯುವ ದಿನಾಂಕ
4	ಸಹಾಯಕ ತೋಟಗಾರಿಕಾ ಅಧಿಕಾರಿ, ತೋಟಗಾರಿಕೆ ಇಲಾಖೆ, ಮೂಡಿಗೆರೆ	7892878905	ಬಿ ಹೊಸಹಳ್ಳಿ	20-04-2026
			ತರುವೆ	27-03-2027
5	ಸಹಾಯಕ ಕಾರ್ಯಪಾಲಕ ಅಭಿಯಂತರರು, ಇಂಜಿನಿಯರಿಂಗ್ ಉಪ ವಿಭಾಗ ಮೂಡಿಗೆರೆ	9480860118	ಬಣಕಲ್	08-03-2027
			ಫಲ್ಗುಣಿ	04-02-2026
6	ಸಹಾಯಕ ತೋಟಗಾರಿಕಾ ಅಧಿಕಾರಿ , ತೋಟಗಾರಿಕೆ ಇಲಾಖೆ, ಮೂಡಿಗೆರೆ	7337643312	ತ್ರಿಪುರ	03-02-2026
			ಬೆಟ್ಟಗೆರೆ	01-02-2026
	ಸಹಾಯಕ ತೋಟಗಾರಿಕಾ	8618881968	ಬಿದರಹಳ್ಳಿ	22-04-2026

7	ನಿರ್ದೇಶಕರು, ಬೀಜುವಳ್ಳಿ ತೋಟಗಾರಿಕೆ ಕ್ಷೇತ್ರ, ಮೂಡಿಗೆರೆ,		ದಾರದಹಳ್ಳಿ	31-01-2026
8	ಸಹಾಯಕ, ತೋಟಗಾರಿಕಾ ಅಧಿಕಾರಿ, ತೋಟಗಾರಿಕೆ ಇಲಾಖೆ, ಮೂಡಿಗೆರೆ	8310907638	ಹೆಸಗಲ್	03-02-2026
9	ಕ್ಷೇತ್ರ ಶಿಕ್ಷಣಾಧಿಕಾರಿ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಮೂಡಿಗೆರೆ	9964934934	ಹಳೇಮೂಡಿಗೆರೆ	31-01-2026
10	ವಲಯ ಅರಣ್ಯಾಧಿಕಾರಿ, ಮೂಡಿಗೆರೆ ವಲಯ, ವಲಯ ಅರಣ್ಯಾಧಿಕಾರಿಗಳ ಕಛೇರಿ, ಮೂಡಿಗೆರೆ.	9980905626	ನಂದೀಪುರ	02-02-2026
			ಮಾಕೋನಹಳ್ಳಿ	02-02-2026
11	ಸಹಾಯಕ ಇಂಜಿನಿಯರ್, ಪಂಚಾಯತ್‌ರಾಜ್, ಇಂಜಿನಿಯರಿಂಗ್ ಇಲಾಖೆ (ಗ್ರಾಮೀಣಾ ಕುಡಿಯುವ ನೀರು ನೈರ್ಮಲ್ಯ), ಮೂಡಿಗೆರೆ	9482526212	ಚಿನ್ನಿಗಾ	03-02-2026
			ಗೋಣಿಬೀಡು	02-02-2026
12	ಸಹಾಯಕ ತೋಟಗಾರಿಕೆ, ಅಧಿಕಾರಿ, ಬೀಜುವಳ್ಳಿ ತೋಟಗಾರಿಕೆ ಕ್ಷೇತ್ರ, ಮೂಡಿಗೆರೆ,	8660444960	ಕಿರುಗುಂದ	01-02-2026
			ಹಂತೂರು	02-02-2026
13	ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಮೂಡಿಗೆರೆ	9449137743	ಊರುಬಗೆ	25-04-2026

1. ಈ ಅಧಿಸೂಚನೆಯು ಮೇಲ್ಕಂಡ ಗ್ರಾಮಪಂಚಾಯ್ತಿಯ ಚುನಾಯಿತ ಸದಸ್ಯರ ಅವಧಿ ಮುಕ್ತಾಯವಾಗುವ ದಿನಾಂಕದಿಂದ ಜಾರಿಗೆ ಬರುತ್ತದೆ.
2. ಮೇಲಿನಂತೆ ನೇಮಕ ಮಾಡಿರುವ ಆಡಳಿತಾಧಿಕಾರಿಯು ಗ್ರಾಮಪಂಚಾಯ್ತಿ ಪ್ರಭಾರ ವಹಿಸಿಕೊಂಡು ಮಾಹಿತಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾಪಂಚಾಯ್ತಿ, ಚಿಕ್ಕಮಗಳೂರು ಹಾಗೂ ಜಿಲ್ಲಾಧಿಕಾರಿ, ಚಿಕ್ಕಮಗಳೂರು ಇವರಿಗೆ ವರದಿ ಸಲ್ಲಿಸಲು ಸೂಚಿಸಿದೆ.
3. ಮೇಲ್ಕಂಡಂತೆ ನೇಮಿಸಿ ನಿಯೋಜಿಸಿರುವ ಅಧಿಕಾರಿಗಳು ಹೆಚ್ಚುವರಿ ಪ್ರಭಾರದಲ್ಲಿ ಸ್ವತಂತ್ರವಾಗಿ ಆಡಳಿತಾಧಿಕಾರಿ ಕಾರ್ಯನಿರ್ವಹಿಸಲು ಸೂಚಿಸಿದೆ.
4. ಮೇಲ್ಕಂಡ ಅಧಿಕಾರಿಗಳು ಸೂಚಿಸಿರುವ ಗ್ರಾಮಪಂಚಾಯ್ತಿಗಳ ದೈನಂದಿನ ಕಾರ್ಯನಿರ್ವಹಣೆಯನ್ನು ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ/ನಿಯಮ ಹಾಗೂ ಆಯಾ ಯೋಜನೆಗಳ ನಿಯಮ ಮಾರ್ಗಸೂಚಿಗಳಂತೆ ಕಾರ್ಯನಿರ್ವಹಿಸತಕ್ಕದ್ದು.
5. ಮೇಲ್ಕಂಡ ಗ್ರಾಮಪಂಚಾಯ್ತಿಗಳಿಗೆ ಸದಸ್ಯರುಗಳು ಚುನಾಯಿತರಾಗಿ ಪೂರ್ಣ ಪ್ರಮಾಣದಲ್ಲಿ ಚುನಾಯಿತ ಪ್ರತಿನಿಧಿಗಳು ರಚನೆಗೊಂಡು ಅಧಿಕಾರ ಪ್ರಾಪ್ತವಾಗುವ ದಿನಾಂಕದವರೆಗೆ ಈ ಅಧಿಸೂಚನೆ ಜಾರಿಯಲ್ಲಿರುತ್ತದೆ. ತದನಂತರ ಮೇಲ್ಕಂಡ ಆಡಳಿತಾಧಿಕಾರಿಯು ಸೂಕ್ತಾನುಸಾರ ಪ್ರಭಾರವನ್ನು ಸಂಬಂಧಿಸಿದವರಿಗೆ ವಹಿಸಿಕೊಟ್ಟು ಕಾರ್ಯದಿಂದ ಬಿಡುಗಡೆ ಹೊಂದಲು ಸೂಚಿಸಿದೆ.
6. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 8(4) ರನ್ವಯ ಆಡಳಿತಾಧಿಕಾರಿಯನ್ನು ಈ ಅಧಿನಿಯಮದ ಉದ್ದೇಶಕ್ಕಾಗಿ ಕ್ರಮಬದ್ಧವಾಗಿ ರಚಿಸಿದ ಗ್ರಾಮಪಂಚಾಯ್ತಿ ಎಂದು ಭಾವಿಸಲಾಗಿದೆ.

7. ಸದರಿ ಅಧಿನಿಯಮದ ಪ್ರಕರಣ 8(3) ರನ್ವಯ ಆಡಳಿತಾಧಿಕಾರಿಯು ಗ್ರಾಮಪಂಚಾಯ್ತಿಯ ಎಲ್ಲಾ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಚಲಾಯಿಸತಕ್ಕದ್ದು ಮತ್ತು ನೆರವೇರಿಸತಕ್ಕದ್ದು.
8. ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮಪಂಚಾಯ್ತಿಗಳ ಅಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006 ರನ್ವಯ ಗ್ರಾಮಪಂಚಾಯ್ತಿಯ ಹಣಕಾಸಿನ ವ್ಯವಹಾರವನ್ನು ಆಡಳಿತಾಧಿಕಾರಿ ಮತ್ತು ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಜಂಟಿಯಾಗಿ ನಿರ್ವಹಿಸತಕ್ಕದ್ದು.
9. ವಾರ್ಡ್ ಸಭೆ ಮತ್ತು ಗ್ರಾಮಸಭೆಗಳನ್ನು ಕಾಲ ಕಾಲಕ್ಕೆ ನಡೆಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.
10. ಅಧಿನಿಯಮದ ಪ್ರಕರಣ 58 ರಂತೆ ಗ್ರಾಮಪಂಚಾಯ್ತಿ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.
11. ಅಧಿನಿಯಮದ ಪ್ರಕರಣ 60 ರಂತೆ ಗ್ರಾಮಪಂಚಾಯ್ತಿಯ ಸಾಮಾನ್ಯ ಅಧಿಕಾರಗಳನ್ನು ಚಲಾಯಿಸತಕ್ಕದ್ದು.
12. ಅಧಿನಿಯಮದ ಪ್ರಕರಣ 62 ರಂತೆ ಅಧ್ಯಕ್ಷನ ಪ್ರಕಾರ್ಯಗಳು ಮತ್ತು ಅಧಿಕಾರಗಳನ್ನು ಚಲಾಯಿಸತಕ್ಕದ್ದು.
13. ಗ್ರಾಮಪಂಚಾಯ್ತಿ ಗ್ರಂಥಾಲಯಗಳ ನಿರ್ವಹಣೆಯನ್ನು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ಗ್ರಾಮ ಪಂಚಾಯಿತಿಗಳಿಗೆ ವರ್ಗಾಯಿಸಲಾಗಿದ್ದು, ಗ್ರಾಮ ಪಂಚಾಯಿತಿ ಗ್ರಂಥಾಲಯ ನಿರ್ವಹಣೆ ಮಾಡತಕ್ಕದ್ದು, ಮತ್ತು ಗ್ರಂಥಾಲಯ ಮೇಲ್ವಿಚಾರಕರಿಗೆ ಗೌರವಧನವನ್ನು ಮಾಸಿಕವಾಗಿ ಪಾವತಿಸತಕ್ಕದ್ದು.
14. ಗ್ರಾಮ ಪಂಚಾಯಿತಿ ನೌಕರರಿಗೆ ಮಾಸಿಕವಾಗಿ ಕನಿಷ್ಠ ವೇತನ ಪಾವತಿಸತಕ್ಕದ್ದು.
15. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 74 ಗ್ರಾಪಂಚಿ 2017 (ಭಾಗ-1) ದಿನಾಂಕ: 12.03.2018 ರಲ್ಲಿ ಗ್ರಾಮ ಪಂಚಾಯಿತಿಗಳು ಯಾವುದೇ ಹುದ್ದೆಗಳಿಗೆ ನೇಮಕಾತಿ ಮಾಡುವುದನ್ನು ಸಂಪೂರ್ಣ ನಿಷೇಧಿಸಲಾಗಿದೆ. ಆಡಳಿತಾಧಿಕಾರಿಯು ಗ್ರಾಮ ಪಂಚಾಯಿತಿಗೆ ಯಾವುದೇ ನೌಕರರನ್ನು ನೇಮಕ ಮಾಡಿಕೊಳ್ಳತಕ್ಕದ್ದಲ್ಲ.

(ನಾಗರಾಜ್ ಎನ್. ಎಂ, ಭಾ.ಆ.ಸೇ)
ಜಿಲ್ಲಾಧಿಕಾರಿ
ಚಿಕ್ಕಮಗಳೂರು ಜಿಲ್ಲೆ,
ಚಿಕ್ಕಮಗಳೂರು.

PR-27

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ,
ಚಿಕ್ಕಮಗಳೂರು – 577101, ಚಿಕ್ಕಮಗಳೂರು ಜಿಲ್ಲೆ, ಕರ್ನಾಟಕ.
OFFICE OF THE DEPUTY COMMISSIONER AND DISTRICT MAGISTRATE,
Chikkamagaluru – 577101, Chikkamagaluru District, Karnataka.
Tel. 08262-230401(O), 230402(R), 231499(ADC), 235262(Rev-Sec), Email: deo.cmagalur@gmail.com/dcckmlr@gmail.com

ಸಂಖ್ಯೆ:DCCKM-ELN0ELNS(GP)/10/2025/CNo: 1009338 ದಿನಾಂಕ:27.01.2026

-: ಅಧಿಕೃತ ಜ್ಞಾಪನ :-
(ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 193 ಕಲಂ 8(1)ರಡಿ)

ವಿಷಯ: ಗ್ರಾಮ ಪಂಚಾಯಿತಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡುವ ಕುರಿತು.

ಉಲ್ಲೇಖ:
1. ಸರ್ಕಾರದ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಕಛೇರಿ ಪತ್ರ ಸಂಖ್ಯೆ: ಗ್ರಾಅಪಂ 1003 ಗ್ರಾಅಪಂ 2025 ದಿನಾಂಕ:16-01-2026
2. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 41 ಮತ್ತು 42 ರಂತೆ

******

ಗ್ರಾಮ ಪಂಚಾಯಿತಿಗಳನ್ನು ಒಳಗೊಂಡಂತೆ ಪಂಚಾಯತ್ ರಾಜ್ ಸಂಸ್ಥೆಗಳ ಸದಸ್ಯರ ಅವಧಿಯು, ಅವುಗಳ ಮೊದಲ ಸಭೆಗಾಗಿ ಗೊತ್ತುಪಡಿಸಿದ ದಿನಾಂಕದಿಂದ 5 ವರ್ಷಗಳ ಅವಧಿಯವರೆಗೆ ಅಸ್ತಿತ್ವದಲ್ಲಿದ್ದು, 5 ವರ್ಷಗಳು ಮುಗಿದ ನಂತರದ ದಿನಾಂಕದಿಂದ ಗ್ರಾಮ ಪಂಚಾಯಿತಿಯ ಅವಧಿಯು ಮುಕ್ತಾಯಗೊಳ್ಳಲಿದ್ದು, ಈ ಹಿಂದೆ 2020-2025 ನೇ ಸಾಲಿಗೆ ರಚಿತವಾಗಿದ್ದ ರಾಜ್ಯದ ಗ್ರಾಮ ಪಂಚಾಯಿತಿಗಳ ಅವಧಿಯು 2026 ನೇ ಜನವರಿ, ಫೆಬ್ರವರಿ, ಮಾರ್ಚ್ ಹಾಗೂ ಮುಂದಿನ ತಿಂಗಳುಗಳ ವಿವಿಧ ದಿನಾಂಕಗಳಂದು ಮುಕ್ತಾಯಗೊಳ್ಳಲಿದ್ದು, 2026-2031 ರ ಅವಧಿಗಾಗಿ ಗ್ರಾಮ ಪಂಚಾಯಿತಿಗಳಿಗೆ ಚುನಾವಣೆ ನಡೆದು ಗ್ರಾಮ ಪಂಚಾಯಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆ ನಡೆಯುವ ದಿನಾಂಕದವರೆಗೆ ಸದರಿ ಗ್ರಾಮ ಪಂಚಾಯಿತಿಗಳಿಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 8(iii) ರನ್ವಯ ಆಡಳಿತಾಧಿಕಾರಿಗಳನ್ನು ನೇಮಿಸಲು ಉಲ್ಲೇಖ(1) ರ ಪತ್ರದಲ್ಲಿ ನಿರ್ದೇಶಿಸಲಾಗಿರುತ್ತದೆ.

ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 41 ಮತ್ತು 42 ರಂತೆ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲ್ಲೂಕಿನಲ್ಲಿ ಅವಧಿ ಪೂರ್ಣಗೊಂಡ ಗ್ರಾಮಪಂಚಾಯ್ತಿಗಳಿಗೆ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 1993ರ ಕಲಂ 8 ರನ್ವಯ ಈ ಕೆಳಕಂಡ ಗ್ರಾಮಪಂಚಾಯ್ತಿಗಳ ಮುಂದೆ ತೋರಿಸಿರುವ ಅಧಿಕಾರಿಯನ್ನು " ಆಡಳಿತಾಧಿಕಾರಿ " ಯಾಗಿ ನೇಮಕ ಮಾಡಿ ಅಧಿಸೂಚನೆ ಹೊರಡಿಸಿದೆ.

ತಾಲ್ಲೂಕು: ಶೃಂಗೇರಿ

ಕ್ರ. ಸಂ	ಆಡಳಿತಾಧಿಕಾರಿಯಾಗಿ ನೇಮಕ ಮಾಡಿದ ಅಧಿಕಾರಿಯ ಹೆಸರು/ಹುದ್ದೆ	ದೂರವಾಣಿ ಮೊಬೈಲ್ ಸಂಖ್ಯೆ	ಗ್ರಾಮ ಪಂಚಾಯಿತಿಯ ಹೆಸರು	ಅವಧಿ ಮುಗಿದ/ ಮುಗಿಯುವ ದಿನಾಂಕ
1	ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಶೃಂಗೇರಿ	9448530357	ಬೇಗಾರು	01-02-2026
			ಧರೇಕೊಪ್ಪ	02-02-2026
2	ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಶೃಂಗೇರಿ	9964264654	ಅಡ್ಡಗದ್ದೆ	31-01-2026
			ವಿದ್ಯಾರಣ್ಯಪುರ	02-02-2026
3	ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಶೃಂಗೇರಿ	9731422266	ಮರ್ಕಲ್	01-02-2026
4	ಸಹಾಯಕ ನಿರ್ದೇಶಕರು ಗ್ರೇಡ್-2, ಸಮಾಜ ಕಲ್ಯಾಣ ಇಲಾಖೆ, ಶೃಂಗೇರಿ	8123720789	ಮೆಣಸೆ	03-02-2026
			ಕೂತುಗೋಡು	01-02-2026
5	ಕ್ಷೇತ್ರ ಶಿಕ್ಷಣಾಧಿಕಾರಿ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಶೃಂಗೇರಿ.	9480695134	ನೆಮ್ಮಾರು	01-02-2026
			ಕೆರೆ	02-02-2026

1 ಮುಕ್ತಾಯವಾಗುವ ದಿನಾಂಕದಿಂದ ಜಾರಿಗೆ ಬರುತ್ತದೆ.

2 ಮೇಲಿನಂತೆ ನೇಮಕ ಮಾಡಿರುವ ಆಡಳಿತಾಧಿಕಾರಿಯು ಗ್ರಾಮಪಂಚಾಯ್ತಿ ಪ್ರಭಾರ ವಹಿಸಿಕೊಂಡು ಮಾಹಿತಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾಪಂಚಾಯ್ತಿ, ಚಿಕ್ಕಮಗಳೂರು ಹಾಗೂ ಜಿಲ್ಲಾಧಿಕಾರಿ, ಚಿಕ್ಕಮಗಳೂರು ಇವರಿಗೆ ವರದಿ ಸಲ್ಲಿಸಲು ಸೂಚಿಸಿದೆ.

3 ಮೇಲ್ಕಂಡಂತೆ ನೇಮಿಸಿ ನಿಯೋಜಿಸಿರುವ ಅಧಿಕಾರಿಗಳು ಹೆಚ್ಚುವರಿ ಪ್ರಭಾರದಲ್ಲಿ ಸ್ವತಂತ್ರವಾಗಿ ಆಡಳಿತಾಧಿಕಾರಿ ಕಾರ್ಯನಿರ್ವಹಿಸಲು ಸೂಚಿಸಿದೆ.

4 ಮೇಲ್ಕಂಡ ಅಧಿಕಾರಿಗಳು ಸೂಚಿಸಿರುವ ಗ್ರಾಮಪಂಚಾಯ್ತಿಗಳ ದೈನಂದಿನ ಕಾರ್ಯನಿರ್ವಹಣೆಯನ್ನು ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ / ನಿಯಮ ಹಾಗೂ ಆಯಾ ಯೋಜನೆಗಳ ನಿಯಮ ಮಾರ್ಗಸೂಚಿಗಳಂತೆ ಕಾರ್ಯನಿರ್ವಹಿಸತಕ್ಕದ್ದು.

5 ಮೇಲ್ಕಂಡ ಗ್ರಾಮಪಂಚಾಯ್ತಿಗಳಿಗೆ ಸದಸ್ಯರುಗಳು ಚುನಾಯಿತರಾಗಿ ಪೂರ್ಣ ಪ್ರಮಾಣದಲ್ಲಿ ಚುನಾಯಿತ ಪ್ರತಿನಿಧಿಗಳು ರಚನೆಗೊಂಡು ಅಧಿಕಾರ ಪ್ರಾಪ್ತವಾಗುವ ದಿನಾಂಕದವರೆಗೆ ಈ ಅಧಿಸೂಚನೆ ಜಾರಿಯಲ್ಲಿರುತ್ತದೆ. ತದನಂತರ ಮೇಲ್ಕಂಡ ಆಡಳಿತಾಧಿಕಾರಿಯು ಸೂಕ್ತಾನುಸಾರ ಪ್ರಭಾರವನ್ನು ಸಂಬಂಧಿಸಿದವರಿಗೆ ವಹಿಸಿಕೊಟ್ಟು ಕಾರ್ಯದಿಂದ ಬಿಡುಗಡೆ ಹೊಂದಲು ಸೂಚಿಸಿದೆ.

6 ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 8(4) ರನ್ವಯ ಆಡಳಿತಾಧಿಕಾರಿಯನ್ನು ಈ ಅಧಿನಿಯಮದ ಉದ್ದೇಶಕ್ಕಾಗಿ ಕ್ರಮಬದ್ಧವಾಗಿ ರಚಿಸಿದ ಗ್ರಾಮಪಂಚಾಯ್ತಿ ಎಂದು ಭಾವಿಸಲಾಗಿದೆ.

7 ಸದರಿ ಅಧಿನಿಯಮದ ಪ್ರಕರಣ 8(3) ರನ್ವಯ ಆಡಳಿತಾಧಿಕಾರಿಯು ಗ್ರಾಮಪಂಚಾಯ್ತಿಯ ಎಲ್ಲಾ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಚಲಾಯಿಸತಕ್ಕದ್ದು ಮತ್ತು ನೆರವೇರಿಸತಕ್ಕದ್ದು.

8 ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮಪಂಚಾಯ್ತಿಗಳ ಅಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006 ರನ್ವಯ ಗ್ರಾಮಪಂಚಾಯ್ತಿಯ ಹಣಕಾಸಿನ ವ್ಯವಹಾರವನ್ನು ಆಡಳಿತಾಧಿಕಾರಿ ಮತ್ತು ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಜಂಟಿಯಾಗಿ ನಿರ್ವಹಿಸತಕ್ಕದ್ದು.

9 ವಾರ್ಡ್ ಸಭೆ ಮತ್ತು ಗ್ರಾಮಸಭೆಗಳನ್ನು ಕಾಲ ಕಾಲಕ್ಕೆ ನಡೆಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

10 ಅಧಿನಿಯಮದ ಪ್ರಕರಣ 58 ರಂತೆ ಗ್ರಾಮಪಂಚಾಯ್ತಿ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

11 ಅಧಿನಿಯಮದ ಪ್ರಕರಣ 60 ರಂತೆ ಗ್ರಾಮಪಂಚಾಯ್ತಿಯ ಸಾಮಾನ್ಯ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

12 ಅಧಿನಿಯಮದ ಪ್ರಕರಣ 62 ರಂತೆ ಅಧ್ಯಕ್ಷನ ಪ್ರಕಾರ್ಯಗಳು ಮತ್ತು ಅಧಿಕಾರಗಳನ್ನು ಚಲಾಯಿಸತಕ್ಕದ್ದು.

13 ಗ್ರಾಮಪಂಚಾಯ್ತಿ ಗ್ರಂಥಾಲಯಗಳ ನಿರ್ವಹಣೆಯನ್ನು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ಗ್ರಾಮ ಪಂಚಾಯಿತಿಗಳಿಗೆ ವರ್ಗಾಯಿಸಲಾಗಿದ್ದು, ಗ್ರಾಮ ಪಂಚಾಯಿತಿ ಗ್ರಂಥಾಲಯ ನಿರ್ವಹಣೆ ಮಾಡತಕ್ಕದ್ದು, ಮತ್ತು ಗ್ರಂಥಾಲಯ ಮೇಲ್ವಿಚಾರಕರಿಗೆ ಗೌರವಧನವನ್ನು ಮಾಸಿಕವಾಗಿ ಪಾವತಿಸತಕ್ಕದ್ದು.

14 ಗ್ರಾಮ ಪಂಚಾಯಿತಿ ನೌಕರರಿಗೆ ಮಾಸಿಕವಾಗಿ ಕನಿಷ್ಠ ವೇತನ ಪಾವತಿಸತಕ್ಕದ್ದು.

15 ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 74 ಗ್ರಾಪಂಚಿ 2017 (ಭಾಗ-1) ದಿನಾಂಕ: 12.03.2018 ರಲ್ಲಿ ಗ್ರಾಮ ಪಂಚಾಯಿತಿಗಳು ಯಾವುದೇ ಹುದ್ದೆಗಳಿಗೆ ನೇಮಕಾತಿ ಮಾಡುವುದನ್ನು ಸಂಪೂರ್ಣ ನಿಷೇಧಿಸಲಾಗಿದೆ. ಆಡಳಿತಾಧಿಕಾರಿಯು ಗ್ರಾಮ ಪಂಚಾಯಿತಿಗೆ ಯಾವುದೇ ನೌಕರರನ್ನು ನೇಮಕ ಮಾಡಿಕೊಳ್ಳತಕ್ಕದ್ದಲ್ಲ.

(ನಾಗರಾಜ ಎನ್. ಎಂ, ಭಾ.ಆ.ಸೇ)
ಜಿಲ್ಲಾಧಿಕಾರಿ
ಚಿಕ್ಕಮಗಳೂರು ಜಿಲ್ಲೆ,
ಚಿಕ್ಕಮಗಳೂರು.

PR-28

(ಕರ್ನಾಟಕ ಸರ್ಕಾರ)

ಪ್ರಾದೇಶಿಕ ಭೂದಾಖಲೆಗಳ ಜಂಟಿ ನಿರ್ದೇಶಕರ ಕಛೇರಿ, ಮೈಸೂರು ವಿಭಾಗ, ಮೈಸೂರು.

ಕರ್ನಾಟಕ ಸರ್ಕಾರ

ಸಂ:ಪ್ರಾ.ಭೂ.ಜಂ.ನಿ.ತಾಂ(7)ನಕ್ಷಾ-01/2024-25. **ದಿನಾಂಕ: 17-01-2026**

:ಪರಿಷ್ಕೃತ ಅಧಿಸೂಚನೆ:

ವಿಷಯ :- ಮೈಸೂರು ಜಿಲ್ಲೆ ಮೈಸೂರು ತಾಲ್ಲೂಕು ಕಸಬಾ ಹೋಬಳಿ "**ಬೋಗಾದಿ ಪಟ್ಟಣ ಪಂಚಾಯಿತಿ**"ಯ ವ್ಯಾಪ್ತಿಗೆ ಒಳಪಡುವ ಆಸ್ತಿಗಳನ್ನು ಕೇಂದ್ರ ಸರ್ಕಾರದ "DILRMP" ಕಾರ್ಯಕ್ರಮದ "NAKSHA" ಯೋಜನೆಯಡಿಯಲ್ಲಿ ಡ್ರೋಣ್/ಯು.ಎ.ವಿ ಆಧುನಿಕ ತಂತ್ರಜ್ಞಾನ ಆಧಾರಿತ ಹೊಸದಾಗಿ ಭೂಮಾಪನ ಕಾರ್ಯವನ್ನು ಪ್ರಾರಂಭಿಸುವ ಬಗ್ಗೆ.

ಉಲ್ಲೇಖ:- ಕರ್ನಾಟಕ ರಾಜ್ಯ ಪತ್ರದ ಸಂಪುಟ 160 ದಿನಾಂಕ:10-01-2025 ಸಂಚಿಕೆ 3, ಭಾಗ 6ಎ ರಲ್ಲಿ ಪುಟ ಸಂಖ್ಯೆ 77 ರಿಂದ 80.

ಭೂಸಂಪನ್ಮೂಲ ಇಲಾಖೆ, ಭಾರತ ಸರ್ಕಾರದ ಪತ್ರ ಸಂಖ್ಯೆ:File No:21014/04/2024-LRD(E-3013932) ದಿನಾಂಕ:25-09-2024 ಮತ್ತು ದಿನಾಂಕ:28-10-2024 ರಲ್ಲಿ ಆದೇಶಿಸಿರುವಂತೆ ಭಾರತ ಸರ್ಕಾರದ "DILRMP" ಕಾರ್ಯಕ್ರಮದ ಭಾಗವಾಗಿ "NAKSHA" ಎಂಬ ಮಹಾತ್ವಕಾಂಕ್ಷಿ ಪ್ರಾಯೋಗಿಕ ಯೋಜನೆಯಡಿಯಲ್ಲಿ ನಗರ/ಪಟ್ಟಣ ಪ್ರದೇಶಗಳ ಆಸ್ತಿಗಳನ್ನು ಹೊಸದಾಗಿ ಭೂಮಾಪನ ಮಾಡಿ ಆಸ್ತಿ ಪತ್ರಗಳನ್ನು ಸೃಜಿಸಲು ಉದ್ದೇಶಿಸಲಾಗಿರುತ್ತದೆ. ಸದರಿ ಉದ್ದೇಶಿತ ಯೋಜನೆಯ ಅನುಷ್ಠಾನ ಸಂಬಂಧ ಮಾನ್ಯ ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು ಇವರ ಅಧಿಕೃತ ಜ್ಞಾಪನ ಸಂಖ್ಯೆ:SSLR/12026/90/2024(e-1602850) ದಿನಾಂಕ:03-12-2024 ರಲ್ಲಿ ನೀಡಿದ ಸೂಚನೆಗಳ ಅನುಸಾರ ಕರ್ನಾಟಕ ರಾಜ್ಯ ಪತ್ರದ ಸಂಪುಟ 160 ದಿನಾಂಕ:10-01-2025 ಸಂಚಿಕೆ 3, ಭಾಗ 6ಎ ರಲ್ಲಿ ಅಧಿಸೂಚನೆ ಹೊರಡಿಸಲಾಗಿರುತ್ತದೆ.

ಮುಂದುವರೆದು, ಮಾನ್ಯ ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು ರವರ ಪತ್ರ ಸಂ:SSLR/12026/62/2025 ದಿನಾಂಕ:-06/08/2025 ಮತ್ತು 22/12/2025 ರಲ್ಲಿ ಸದರಿ ಅಧಿಸೂಚನೆಯಾಗಿರುವ "**ಬೋಗಾದಿ ಪಟ್ಟಣ ಪಂಚಾಯಿತಿ**" ವ್ಯಾಪ್ತಿಯ ಗ್ರಾಮಗಳ ಕೆಲವು ಸರ್ವೆ ನಂಬರುಗಳನ್ನು ಸೇರ್ಪಡೆಗೊಳಿಸುವ ಬಾಬ್ತು ಪರಿಶೀಲಿಸಿ ಅಗತ್ಯ ಕ್ರಮ ವಹಿಸಲು ಸೂಚನೆ ನೀಡಿರುತ್ತಾರೆ. ಮಾನ್ಯರ ಸೂಚನೆಯಂತೆ ದಾಖಲೆಗಳನ್ನು ಪರಿಶೀಲಿಸಿಕೊಂಡು ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಮತ್ತು ಪದನಿಮಿತ್ತ ಭೂದಾಖಲೆಗಳ ಉಪನಿರ್ದೇಶಕರು, ಮೈಸೂರು ಜಿಲ್ಲೆ, ಮೈಸೂರು ರವರ ಪತ್ರದ ದಿನಾಂಕ:-14-01-2026 ರಲ್ಲಿ ಹಾಗೂ ನಗರಮಾಪನ ಯೋಜನಾಧಿಕಾರಿಗಳು, ಯು.ಪಿ.ಓ.ಆರ್.ಕಛೇರಿ,ನಜರ್‌ಬಾದ್, ಮೈಸೂರು ರವರ ಪತ್ರ ಸಂ:ನಮಾಯೋಕ.ತಾಂ(1)ನಕ್ಷಾ.ಪಿ.ಆರ್.01/2024-25 ದಿನಾಂಕ:-29/12/2025 ರಲ್ಲಿ "**ಬೋಗಾದಿ ಪಟ್ಟಣ ಪಂಚಾಯಿತಿ**" ವ್ಯಾಪ್ತಿಯ ಗ್ರಾಮಗಳ ಪೈಕಿ ಸೇರ್ಪಡೆಗೊಳಿಸಬೇಕಾದ ಸರ್ವೆ ನಂಬರ್‌ಗಳ ಮಾಹಿತಿಯನ್ನು ಸಲ್ಲಿಸಿರುತ್ತಾರೆ.

ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಮತ್ತು ಪದನಿಮಿತ್ತ ಭೂದಾಖಲೆಗಳ ಉಪನಿರ್ದೇಶಕರು, ಮೈಸೂರು ಜಿಲ್ಲೆ, ಮೈಸೂರು ಮತ್ತು ನಗರಮಾಪನ ಯೋಜನಾಧಿಕಾರಿಗಳು, ಯೋಜನಾಧಿಕಾರಿಗಳ ಕಛೇರಿ, ನಜರ್‌ಬಾದ್, ಮೈಸೂರು ರವರು ತಯಾರಿಸಿ ಸಲ್ಲಿಸಲಾದ ಮಾಹಿತಿಯನ್ನು ಪರಿಶೀಲಿಸಿಕೊಂಡು ಕರ್ನಾಟಕ ಭೂಕಂದಾಯ ಅಧಿನಿಯಮ 1964 ಕಲಂ 148(1) ಹಾಗೂ 152 ರ ಅಡಿಯಲ್ಲಿ ಸೂಚಿತವಾದ ಅಧಿಕಾರದ ಮೇರೆಗೆ ಉಲ್ಲೇಖಿತ ಅಧಿಸೂಚನೆಯೊಂದಿಗೆ ಸೇರ್ಪಡೆಗೊಳಿಸುವ ವಿವರಗಳನ್ನು ಈ ಕೆಳಕಂಡ ಅನುಸೂಚಿ-1, ಅನುಸೂಚಿ-2 ರಲ್ಲಿ ನಮೂದಿಸಿದೆ ಹಾಗೂ ಬೋಗಾದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಗ್ರಾಮಗಳ ಪೈಕಿ ಮಾದಗಳ್ಳಿ, ಮರಟಿಕ್ಯಾತನಹಳ್ಳಿ, ಕೇರ್ಗಳ್ಳಿ, ಜಟ್ಟಿಹುಂಡಿ, ಕೆ.ಹೆಮ್ಮನಹಳ್ಳಿ, ಕೆಮ್ಮಣ್ಣುಪುರ, ಬಲ್ಲಹಳ್ಳಿ, ಕುಮಾರಬೀಡು ಮತ್ತು ಬೋಗಾದಿ ಗ್ರಾಮಗಳ ಸರ್ವೆ ನಂಬರ್‌ಗಳೊಂದಿಗೆ ಹತ್ತಿಕೊಂಡಿರುವ ಖರಾಬುಗಳು, ಊರು ಹಾಗೂ ಮಜರೆಯನ್ನು "NAKSHA"(NAtional Geospatial Knowledge–based land Survey of Urban HAbitations) ಯೋಜನೆಯಡಿಯಲ್ಲಿ ಡ್ರೋಣ್ / ಯು.ಎ.ವಿ ಆಧುನಿಕ ತಂತ್ರಜ್ಞಾನ ಆಧಾರಿತ ಹೊಸದಾಗಿ ಭೂಮಾಪನ ಮಾಡಿ ಆಸ್ತಿ ಪತ್ರಗಳನ್ನು ಸೃಜಿಸಲು ಈ ಪರಿಷ್ಕೃತ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಸಹಿ/-
ಪ್ರಾದೇಶಿಕ ಭೂದಾಖಲೆಗಳ ಜಂಟಿ ನಿರ್ದೇಶಕರು
ಮೈಸೂರು ವಿಭಾಗ, ಮೈಸೂರು

ಅನುಸೂಚಿ 01

ಪೂರ್ವಕ್ಕೆ :- ಕಸಬಾ ಹೋಬಳಿ ಲಿಂಗಾಂಬುದಿ ಗ್ರಾಮದ ಸ.ನಂ. 1, 2 ,4,5,65 ರಿಂದ ಕಸಬಾ ಹೋಬಳಿ ದಟ್ಟಗಳ್ಳಿ ಗ್ರಾಮದ ಸರ್ವೆ ನಂಬರು 90, 143, 144, 145, 146, 160, 161, 162, 163, 165, 171 ಹಾಗೂ ಕಸಬಾ ಹೋಬಳಿ ಬೋಗಾದಿ ಗ್ರಾಮದ ಸರ್ವೆ ನಂಬರು 96, 99, 100, 88, 87, 85, 112, 227, 363, 356 ಮತ್ತು ಕಸಬಾ ಹೋಬಳಿ ಅಯ್ಯಜಯನ ಹುಂಡಿ ಗ್ರಾಮದ ಸರ್ವೆ ನಂಬರು 16, 17, 01 ರ ಮೂಲಕ ಮೈಸೂರು ರಿಂಗ್ ರಸ್ತೆ ಹಾಗೂ ಮೈಸೂರು ಮಹಾನಗರ ಪಾಲಿಕೆ ಗಡಿಯವರೆಗೆ ಒಳಗೊಂಡಿರುವ ಪ್ರದೇಶ.

ಉತ್ತರಕ್ಕೆ :- ಕಸಬಾ ಹೋಬಳಿ ಹಿನಕಲ್ ಗ್ರಾಮದ ಸರ್ವೆ ನಂಬರು . 249, 251, 252, 257, 275, 276 ಹಾಗೂ ಕಸಬಾ ಹೋಬಳಿ ಬಸವನಹಳ್ಳಿ, ಗ್ರಾಮದ, ಸರ್ವೆ ನಂಬರು 98, 97, 96, 95, 94, 93, 91, 90, 89, 85, 84, 83, 129, 73, 72, 135, 139, 154, 157 ಮತ್ತು ಇಲವಾಲ ಹೋಬಳಿ ಬೆಳವಾಡಿ ಗ್ರಾಮದ ಸರ್ವೆ ನಂಬರ್ 180, 181, 182, 185, 186, 187, 206, 207, 212, 219, 214, 215, 216, ಇಲವಾಲ ಹೋಬಳಿ ಹುಯಿಲಾಳು ಗ್ರಾಮಕ್ಕೆ ಸೇರಿದ ಸರ್ವೆ ನಂಬರು . 143, 144, 145, 146, 147, 151, 152, 153, 154, 182, 183, 184, 185, 186, 187 ಮತ್ತು 190 ಸರ್ಕಾರಿ ಕೆರೆ ಹಾಗೂ 313, 312, 193 ಮತ್ತು 194 ರನಡುವಿನ ಹದ್ದುಹಿಡಿದ ಹಳ್ಳ ಮತ್ತು 203, 204, 205, 295 ಹಾಗೂ ಇಲವಾಲ ಹೋಬಳಿ ಬೊಮ್ಮೇನಹಳ್ಳಿ, ಗ್ರಾಮದ ಸ.ನಂ. 66 ರವರೆಗೆ ಒಳಗೊಂಡಿರುವ ಪ್ರದೇಶ.

ಪಶ್ಚಿಮಕ್ಕೆ :- ಇಲವಾಲ ಹೋಬಳಿ ನುಗ್ಗಹಳ್ಳಿ, ಗ್ರಾಮಕ್ಕೆ ಸೇರಿದ ಸರ್ವೆ ನಂಬರು 43, 44 ಹಾಗೂ ಇಲವಾಲ ಹೋಬಳಿ ಶೆಟ್ಟಿನಾಯಕನಹಳ್ಳಿ, ಗ್ರಾಮದ ಸರ್ವೆ ನಂಬರು 50, 51, 52, 56, 59, 58, 61, 62, 63, 65, 64, 70, 71, 72 ರವರೆಗೆ ಒಳಗೊಂಡಿರುವ ಪ್ರದೇಶ.

ದಕ್ಷಿಣಕ್ಕೆ :- ಇಲವಾಲ ಹೋಬಳಿ ಕುಮಾರಬೀಡು ಗ್ರಾಮಕ್ಕೆ ಸೇರಿದ ಸರ್ವೆ ನಂಬರು 113, 114, 115, 116, 101, 102, 103, 05, 06, 07, 08, 09, 17, 19, 23, ಇಲವಾಲ ಹೋಬಳಿ ಗೋಹಳ್ಳಿ, ಗ್ರಾಮದ ಸರ್ವೆ ನಂಬರು . 02, 03, 14, 15, 23, 25, 34, 35, 37, 38, 42, ಗೋಹಳ್ಳಿ, ಗ್ರಾಮದ ಹದ್ದುಹಿಡಿದ ಹಳ್ಳ, ಮತ್ತು ಸರ್ವೆ ನಂಬರು 44, 46, 47, 48, 49, 50, 52 ಮತ್ತು ಜಯಪುರ ಹೋಬಳಿ ಬಲ್ಲಹಳ್ಳಿ, ಗ್ರಾಮಕ್ಕೆ ಸೇರಿದ ಸರ್ವೆ ನಂಬರು 24 ಮತ್ತು ಹಳ್ಳ, 85, ಮಜರೆ ಹುಣಸೆಕುಪ್ಪೆ ಹಾಗೂ ಸರ್ವೆ ನಂಬರು 89, 95 ಮತ್ತು ರಸ್ತೆ ಸ.ನಂ. 99, 100, 102, 103, 104 ಹಾಗೂ ಜಯಪುರ ಹೋಬಳಿ ನಗರ್ತಹಳ್ಳಿ, ಗ್ರಾಮದ ಸರ್ವೆ ನಂಬರು 97, 101, 102, 118 ಮತ್ತು ಜಯಪುರ ಹೋಬಳಿ ಯಡಹಳ್ಳಿ, ಗ್ರಾಮದ ಸರ್ವೆ ನಂಬರು 92, 93, 69 ರವರೆಗೆ ಒಳಗೊಂಡಿರುವ

ಅನುಬಂಧ - 02

ನಕ್ಷಾ ಯೋಜನೆಗೆ ಪರಿಗಣಿಸಿರುವ ಬೋಗಾದಿ ಪಟ್ಟಣ ಪಂಚಾಯ್ತಿ ವ್ಯಾಪ್ತಿಯ ಬೋಗಾದಿ ಗ್ರಾಮದಲ್ಲಿ ಯೋಜನೆಗೆ ಸೇರ್ಪಡೆಗೊಳಿಸುತ್ತಿರುವ ಸರ್ವೆ ನಂಬರುಗಳ ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ	ಜಿಲ್ಲೆ	ತಾಲ್ಲೂಕು	ಹೋಬಳಿ	ಗ್ರಾಮ	ಸೇರ್ಪಡೆಗೊಳಿಸುತ್ತಿರುವ ಸರ್ವೆನಂಬರುಗಳು
1	ಮೈಸೂರು	ಮೈಸೂರು	ಕಸಬಾ	ಬೋಗಾದಿ	20,21,22,23,24,25,26,27,28,29,84,89,90, 113 ಅಲ್ಲದೆ ಬೋಗಾದಿ ಗ್ರಾಮದಲ್ಲಿ ಯೋಜನೆಗೆ ಒಳಪಡುವ ಸರ್ವೆ ನಂಬರುಗಳಿಗೆ ಹತ್ತಿಕೊಂಡಿರುವ ಖರಾಬುಗಳು, ಊರು ಹಾಗೂ ಮಜರೆಯನ್ನು ಒಳಗೊಂಡಿರುತ್ತದೆ.
2	ಮೈಸೂರು	ಮೈಸೂರು	ಇಲವಾಲ	ಮಾದಗಳ್ಳಿ	153 ಅಲ್ಲದೆ ಮಾದಗಳ್ಳಿ ಗ್ರಾಮದಲ್ಲಿನ ಸರ್ವೆ ನಂಬರುಗಳಿಗೆ ಹತ್ತಿಕೊಂಡಿರುವ ಖರಾಬುಗಳು, ಊರು ಹಾಗೂ ಮಜರೆಯನ್ನು ಒಳಗೊಂಡಿರುತ್ತದೆ.
3	ಮೈಸೂರು	ಮೈಸೂರು	ಜಯಪುರ	ಕೇರ್ಗಳ್ಳಿ	353,354,355,356,357,358,359,360,361,362 ಅಲ್ಲದೆ ಕೇರ್ಗಳ್ಳಿ ಗ್ರಾಮದಲ್ಲಿನ ಸರ್ವೆ ನಂಬರುಗಳಿಗೆ ಹತ್ತಿಕೊಂಡಿರುವ ಖರಾಬುಗಳು, ಊರು ಹಾಗೂ ಮಜರೆಯನ್ನು ಒಳಗೊಂಡಿರುತ್ತದೆ.
4	ಮೈಸೂರು	ಮೈಸೂರು	ಇಲವಾಲ	ಜಟ್ಟಿಹುಂಡಿ	ಸ.ನಂ.91,92,93 ಅಲ್ಲದೆ ಜಟ್ಟಿಹುಂಡಿ ಗ್ರಾಮದಲ್ಲಿ ಯೋಜನೆಗೆ ಒಳಪಡುವ ಸರ್ವೆನಂಬರುಗಳಿಗೆ ಹೊಂದಿಕೊಂಡಿರುವ ಖರಾಬುಗಳು, ಊರು ಹಾಗೂ ಮಜರೆಯನ್ನು ಒಳಗೊಂಡಿರುತ್ತದೆ.
5	ಮೈಸೂರು	ಮೈಸೂರು	ಇಲವಾಲ	ಕೆ ಹೆಮ್ಮನಹಳ್ಳಿ	ಸ.ನಂ.285, 286, 287 ಅಲ್ಲದೆ ಕೆ. ಹೆಮ್ಮನಹಳ್ಳಿ ಗ್ರಾಮದಲ್ಲಿ ಯೋಜನೆಗೆ ಒಳಪಡುವ ಸರ್ವೆ ನಂಬರುಗಳಿಗೆ ಹೊಂದಿಕೊಂಡಿರುವ ಖರಾಬುಗಳು ಊರು ಹಾಗೂ ಮಜರೆಯನ್ನು ಒಳಗೊಂಡಿರುತ್ತದೆ.

ಪ್ರಾದೇಶಿಕ ಭೂದಾಖಲೆಗಳ ಜಂಟಿ ನಿರ್ದೇಶಕರು
ಮೈಸೂರು ವಿಭಾಗ, ಮೈಸೂರು

PR-29

85 ನಮೂನೆ-V

[ಕರ್ನಾಟಕ ತಿದ್ದುಪಡಿ ನಿಯಮ 20(ಎ) (2)]

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ-2023ರ ಕಲಂ-11(1) ಮೇರೆಗೆಅಧಿಸೂಚನೆ

ಸಂಖ್ಯೆ:ಎಲ್.ಎ.ಕ್ಯೂಸಿಆರ್01/2023-24 ದಿನಾಂಕ: 01-01-2026

ಸಾರ್ವಜನಿಕ ಉದ್ದೇಶದ ಭದ್ರಾ ಮೇಲ್ದಂಡೆ ಯೋಜನೆ ಪ್ಯಾಕೇಜ್-1 ರ ಕಾಮಗಾರಿಗಾಗಿ ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕು, ಹಿರೇನಲ್ಲೂರು ಹೋಬಳಿ, ಚಿಕ್ಕನಲ್ಲೂರು ಗ್ರಾಮದ ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿರುವ ಹೆಚ್ಚುವರಿ ಜಮೀನುಗಳ ಭೂಸ್ವಾಧೀನತೆಯ ಅವಶ್ಯಕತೆಯಿರುತ್ತದೆಯೆಂದು ಸರ್ಕಾರವು ಭಾವಿಸುತ್ತದೆ. ಈ ಯೋಜನೆಯ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ-2013 ಚಾಪ್ಟರ್-3ರ ಕಲಂ-10ರಡಿಯಲ್ಲಿ ನೀರಾವರಿ ಕಾಲುವೆ ನಿರ್ಮಾಣಕ್ಕೆ ಸಾಮಾಜಿಕ ಪರಿಣಾಮ ಮೌಲ್ಯಮಾಪನಕ್ಕೆ ವಿನಾಯಿತಿಯನ್ನು ನೀಡಲಾಗಿರುತ್ತದೆ ಮತ್ತು ಕಲಂ 6(2) ರಡಿ ನೀರಾವರಿ ಯೋಜನೆಗಳಿಗಾಗಿ ಭೂಸ್ವಾಧೀನಪಡಿಸುವಾಗ ಪರಿಸರದ ಮೇಲಿನ ಪರಿಣಾಮ ನಿರ್ಧರಣ ಅಂಶಗಳ (Environmental Impact Assessment) ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಇಲಾಖೆ ಪತ್ರ ಸಂಖ್ಯೆ: ಜೆ-12011/7/2009-IAI(Vol-II) ದಿನಾಂಕ:10/07/2019ರ ನಡವಳಿಯಲ್ಲಿ ತೀರುವಳಿ (Environmental Impact Assessment) ನೀಡಲಾಗಿರುತ್ತದೆ.

ಚಾಪ್ಟರ್ 3ರ ಕಲಂ-10ರಡಿ ನೀರಾವರಿ ಕಾಲುವೆಗಳಿಗೆ Social Impact Assessment ರಿಂದ ವಿನಾಯಿತಿಇರುತ್ತದೆ. ಭದ್ರಾ ಮೇಲ್ದಂಡೆ ಯೋಜನೆಯು ನೀರಾವರಿ ಯೋಜನೆಯಾಗಿದ್ದು, ಇದಕ್ಕೆ ಕಲಂ-10(ಎ) ರಡಿ ಅಧಿಸೂಚನೆ ಹೊರಡಿಸುವ ಅಗತ್ಯವಿರುವುದಿಲ್ಲವೆಂದು ನೇರವಾಗಿ ಪ್ರಾರಂಭಿಕ (ಕಲಂ-11(1) ರ ಅಧಿಸೂಚನೆ ಹೊರಡಿಸಲು ಅನುವು ಮಾಡಿಕೊಡಬೇಕೆಂದು ಕಾರ್ಯಪಾಲಕ ಇಂಜಿನಿಯರ್, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಭದ್ರಾ ಮೇಲ್ದಂಡೆ ಯೋಜನೆ, ವಿಭಾಗ-01, ಕಡೂರು ಇವರು ಕೋರಿರುತ್ತಾರೆ.

ಆದುದರಿಂದ ಈ ಮೂಲಕ ತಿಳಿಸುವುದೇನೆಂದರೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ-2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ:30)ರ ಕಲಂ-12 ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ರವರಿಂದ ಈ ಮೂಲಕ ಕಾರ್ಯಪಾಲನೆ ಪ್ರಾಧಿಕಾರವನ್ನು ಉಪವಿಭಾಗಾಧಿಕಾರಿಗಳು ಹಾಗೂ ಭೂಸ್ವಾಧೀನಾಧಿಕಾರಿಗಳು, ತರೀಕೆರೆ ಇವರಿಗೆ ನೀಡಲಾಗಿದೆ.

ಈ ಜಮೀನುಗಳ ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟ ಮೋಜಿಣಿದಾರರಿಗಾಗಲೀ ಅಥವಾ ಈ ಕೆಲಸ ಮಾಡುವವರಿಗಾಗಲೀ ಯಾರೂ ಅಡ್ಡಿ ಮಾಡಕೂಡದೆಂದು ಎಚ್ಚರಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ-2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ: 30) ರ ಕಲಂ-11(1) ಮೇರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರಿ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ, ಭೋಗ್ಯಕ್ಕೆ ಅಡವಿಡುವ, ಅನುಭವಿಸುವ, ಬದಲಾಯಿಸುವ ಅಥವಾ ಇನ್ನೂ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದಂತೆ ನಿರ್ಬಂಧಿಸಿದೆ. ಅಂತಹ ಯಾವುದೇ ಕ್ರಮ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ

ಕಾರ್ಯಗಳನ್ನು ಕೈಗೊಂಡಲ್ಲಿ ಅದನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೇ ಅಂತಿಮವಾಗಿ ಸದರಿ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ-2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ:30)ರ ಕಲಂ-15(1)ರ ಮೇರೆಗೆ ಆಸಕ್ತಿಯುಳ್ಳವರು ತಮ್ಮ ಆಕ್ಷೇಪವಿದ್ದಲ್ಲಿ, ಆಕ್ಷೇಪಣೆಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನಗಳೊಳಗಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸಬೇಕು. ತದನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಯಾವುದೇ ಮುನ್ಸೂಚನೆ ನೀಡದೇ ವಿಲೇಗೆ ಹಾಕಲಾಗುವುದು

ಸದರಿ ಪ್ರಕರಣದಲ್ಲಿ ಭೂಸ್ವಾಧೀನಕ್ಕೆ ಒಳಪಡುವ ಜಮೀನಿನ ಒಂದು ನಕ್ಷೆಯನ್ನು ಉಪವಿಭಾಗಾಧಿಕಾರಿಗಳು ಹಾಗೂ ಭೂಸ್ವಾಧೀನಾಧಿಕಾರಿಗಳು, ತರೀಕೆರೆ, ಭೂದಾಖಲೆಗಳ ಸಹಾಯಕ ನಿರ್ದೇಶಕರು, ತರೀಕೆರೆ, ಹಾಗೂ ಕಾರ್ಯನಿರ್ವಾಹಕ ಅಭಿಯಂತರರು, ವಿ.ಜ.ನಿ.ನಿ, ಭದ್ರಾ ಮೇಲ್ದಂಡೆ ಯೋಜನೆ, ವಿಭಾಗ ನಂ.1, ಕಡೂರು ಇವರ ಕಾರ್ಯಾಲಯಗಳ ಪರಿಶೀಲನೆಗಾಗಿ ಇಡಲಾಗಿದೆ.

ಅನುಸೂಚಿ

ಜಿಲ್ಲೆ: ಚಿಕ್ಕಮಗಳೂರು **ಕಡೂರು : ತಾಲ್ಲೂಕು** **ಹೋಬಳಿ: ಹಿರೇನಲ್ಲೂರು** **ಗ್ರಾಮ: ಚಿಕ್ಕನಲ್ಲೂರು**

ಕ್ರ ಸಂ	ಖಾತೆದಾರರ ಹೆಸರು (ಪಹಣಿಯಂತೆ)		ಸರ್ವೆ/ ಖಾತಾ ನಂಬರ್	ಸರ್ವೆ/ ಖಾತಾ ನಂಬರ್‌ದಲ್ಲಿನ ಒಟ್ಟು ವಿಸ್ತೀರ್ಣ (ಪಹಣಿ/ಉತಾರರನ್ವಯ)		ಸ್ವಾಧೀನಕ್ಕೊಳಪಡುವ ಒಟ್ಟು ವಿಸ್ತೀರ್ಣ 11(1) ರಂತೆ		ತರಹೆ	ಚೆಕ್ಕಬಂದಿ/ ಸರಹದ್ದು				ಷರಾ
	ಭೂಮಾಲೀಕರ/ ಹಿಡುವಳಿದಾರರ ಹೆಸರು	ಅನುಭವದಾರರ ಹೆಸರು		ಕೃಷಿ/ ಕೃಷಿಯೇತರ	ಖರಾಬು	ಕೃಷಿ/ ಕೃಷಿಯೇತರ	ಖರಾಬು		ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	
1	2	3	4	5	6	7	8	9	10	11	12	13	14
1	ಗಿರಿಜಮ್ಮ ಕೋಂ. ಲೇ ಬಿ. ದೊಡ್ಡಯ್ಯ	ಗಿರಿಜಮ್ಮ ಕೋಂ. ಲೇ ಬಿ. ದೊಡ್ಡಯ್ಯ	1/1	0-26.00	0-02.00	0-04.00	0-01.00	ಖುಷ್ಕಿ	ಸನಂ. 1/1	ಸನಂ. 1/4	230	ಸನಂ. 1/6	
2	ಮಲ್ಲಮ್ಮ ಕೋಂ. ಈರಪ್ಪ	ಮಲ್ಲಮ್ಮ ಕೋಂ. ಈರಪ್ಪ	1/5ಬಿ	00-07.00	00-01.00	00-03.00	-	ಬಾಗಾಯ್ತು	ಸನಂ. 1/6	ಉಳಿಕೆ 1/5	ಸನಂ. 1/1	ಸನಂ. 1/6	
3	ಪುಟ್ಟಪ್ಪ ಬಿನ್ ಚನ್ನಬಸಪ್ಪ ರುದ್ರಪ್ಪ ಬಿನ್ ಚನ್ನಬಸಪ್ಪ ಚಂದ್ರಪ್ಪ ಬಿನ್ ಚನ್ನಬಸಪ್ಪ ಬಸವರಾಜಪ್ಪ ಬಿನ್ ಚನ್ನಬಸಪ್ಪ ಕಲ್ಲೇಶಪ್ಪ ಬಿನ್ ಚನ್ನಬಸಪ್ಪ (ಜಂಟಿ)	ಪುಟ್ಟಪ್ಪ ಬಿನ್ ಚನ್ನಬಸಪ್ಪ ರುದ್ರಪ್ಪ ಬಿನ್ ಚನ್ನಬಸಪ್ಪ ಚಂದ್ರಪ್ಪ ಬಿನ್ ಚನ್ನಬಸಪ್ಪ ಬಸವರಾಜಪ್ಪ ಬಿನ್ ಚನ್ನಬಸಪ್ಪ ಕಲ್ಲೇಶಪ್ಪ ಬಿನ್ ಚನ್ನಬಸಪ್ಪ (ಜಂಟಿ)	1/6	0-25.00	0-01.00	0-02.00	-	ಖುಷ್ಕಿ	ಸನಂ. 1/6 ಉಳಿಕೆ	ಸನಂ. 1/5	ಸನಂ. 1/5	ಸನಂ. 1/13	
4	ಪ್ರೇಮ ಸಿ ಎನ್ ಕೋಂ ಓಂಕಾರಪ್ಪ ಎನ್ ಎಸ್ (ತಂದೆ ಎನ್ ನಾಗರಾಜಪ್ಪ)	ಪ್ರೇಮ ಸಿ ಎನ್ ಕೋಂ ಓಂಕಾರಪ್ಪ ಎನ್ ಎಸ್ (ತಂದೆ ಎನ್ ನಾಗರಾಜಪ್ಪ)	2/3	1-08.00	-	0-03.00	-	ಖುಷ್ಕಿ	ಸನಂ. 2/3 ವಿಜನಿನಿ	ಉಳಿಕೆ	ಸನಂ 2/2	.2/6	
5	ಮೀನಾಕ್ಷಮ್ಮ ಕೋಂ ಲೇ. ನಾಗಪ್ಪ ಚಂದ್ರಮ್ಮ ಕೋಂ ಲೇ. ಬಸವರಾಜು	ಮೀನಾಕ್ಷಮ್ಮ ಕೋಂ ಲೇ. ನಾಗಪ್ಪ	3/5		-	0-07.12	-	ಖುಷ್ಕಿ	ಸನಂ. 3/5	ಸನಂ.35 ಉಳಿಕೆ	3/6	3/7	

	ಜಯಸ್ವಾಮಿ ಸಿ. ಎನ್ ಬಿನ್ ಲೇ. ನಾಗಪ್ಪ	ಚಂದ್ರಮ್ಮ ಕೋಂ ಲೇ. ಬಸವರಾಜು ಜಯಸ್ವಾಮಿ ಸಿ. ಎನ್ ಬಿನ್ ಲೇ. ನಾಗಪ್ಪ		1-05.00					ವಿಜನಿನಿ			
6	ಸಿ. ಕೆ. ಚಂದ್ರಶೇಖರ್ ಬಿನ್ ಲೇ. ಬಿ. ಕಲ್ಲಪ್ಪ	ಸಿ. ಕೆ. ಚಂದ್ರಶೇಖರ್ ಬಿನ್ ಲೇ. ಬಿ. ಕಲ್ಲಪ್ಪ	3/7	0-36.00	-	0-08.04	-	ಖುಷ್ಕಿ	ಸನಂ 3/7 ವಿಜನಿನಿ	ಉಳಿಕೆ	ಸನಂ. 3/5	ಸನಂ. 3/15	-
1	**2**	**3**	**4**	**5**	**6**	**7**	**8**	**9**	**10**	**11**	**12**	**13**	**14**
7	ಮರುಳಸಿದ್ಧಮ್ಮ ಕೋಂ. ಲೇ. ಸಿ.ಕೆ. ನಾಗಪ್ಪ	ಮರುಳಸಿದ್ಧಮ್ಮ ಕೋಂ. ಲೇ. ಸಿ.ಕೆ. ನಾಗಪ್ಪ	3/8	00-38.00	-	0-07.08	-	ಖುಷ್ಕಿ	3/8 ವಿಜನಿನಿ	ಉಳಿಕೆ	ಸನಂ. 3/15	ಸನಂ. 3/16	
8	ಸಿ.ಕೆ. ಚಂದ್ರಶೇಖರ್ ಬಿನ್ ಲೇ.. ಬಿ. ಕಲ್ಲಪ್ಪ	ಸಿ.ಕೆ. ಚಂದ್ರಶೇಖರ್ ಬಿನ್ ಲೆ. ಬಿ. ಕಲ್ಲಪ್ಪ	3/10	00-23.00	-	0-11.00		ಖುಷ್ಕಿ	3/10 ವಿಜನಿನಿ	ಸನಂ. 3/10 ಉಳಿಕೆ	ಲಾಹಿ 3/7	ಲಾಹಿ ನಂ. 3/8	
9	ಎಸ್ ಬಸವರಾಜಪ್ಪ ಬಿನ್ ಸಿದ್ರಾಮಪ್ಪ	ಎಸ್ ಬಸವರಾಜಪ್ಪ ಬಿನ್ ಸಿದ್ರಾಮಪ್ಪ	3/11	00-20.08	-	0-06.08	-	ಖುಷ್ಕಿ	ವಿಜನಿನಿ	ಉಳಿಕೆ	ಸನಂ. 3/17	3/19	
10	ನಂಜುಂಡಪ್ಪ ಬಿನ್ ನಾಗಪ್ಪ ಶಿವಾನಂದ ಬಿನ್ ಲೇ. ನಾಗಪ್ಪ ಮೀನಾಕ್ಷಮ್ಮ ಕೋಂ ಲೇ. ಗಂಗಾಧರಪ್ಪ ಮಹೇಶ್ವರಪ್ಪ ಬಿನ್ ಲೇ. ನಾಗಪ್ಪ ಹೇಮಾವತಿ ಬಿನ್ ಲೇ. ನಾಗಪ್ಪ	ನಂಜುಂಡಪ್ಪ ಬಿನ್ ನಾಗಪ್ಪ ಶಿವಾನಂದ ಬಿನ್ ಲೇ. ನಾಗಪ್ಪ ಮೀನಾಕ್ಷಮ್ಮ ಕೋಂ ಲೇ. ಗಂಗಾಧರಪ್ಪ ಮಹೇಶ್ವರಪ್ಪ ಬಿನ್ ಲೇ. ನಾಗಪ್ಪ ಹೇಮಾವತಿ ಬಿನ್ ಲೇ. ನಾಗಪ್ಪ	3/18	00-38.00	-	0-18.00	-	ಖುಷ್ಕಿ	3/18 ವಿಜನಿನಿ	ಲಾ ನಂ. 3/16 3/17	ಲಾಹಿ ನಂ. 3/5	ಸನಂ. 3/11	
11	ಅನ್ನಪೂರ್ಣಮ್ಮ ಕೋಂ ಮಲ್ಲೇಶಪ್ಪ ಆರ್, ಜ್ಯೋತಿ ಸಿ.ಎಮ್ ಕೋಂ ಬಿ. ಎಮ್ ಚಂದ್ರಪ್ಪ, ಶಾಂತಕುಮಾರಿ ಸಿ ಎಮ್ ಕೋಂ ಆನಂದ್ ಕೆ ಎಸ್, ಶೋಭಾ ಕೋಂ ತಿಪ್ಪೇಶ್, ವಿಜಯ್ ಕುಮಾರ್ ಕೋಂ ಬಿನ್ ಮಲ್ಲೇಶಪ್ಪ ಆರ್, ಸುನೀತ ಸಿ.ಎಮ್ ಕೋಂ ಪ್ರಭಾಕರ್	ಅನ್ನಪೂರ್ಣಮ್ಮ ಕೋಂ ಮಲ್ಲೇಶಪ್ಪ ಆರ್, ಜ್ಯೋತಿ ಸಿ.ಎಮ್ ಕೋಂ ಬಿ. ಎಮ್ ಚಂದ್ರಪ್ಪ, ಶಾಂತಕುಮಾರಿ ಸಿ ಎಮ್ ಕೋಂ ಆನಂದ್ ಕೆ ಎಸ್, ಶೋಭಾ ಕೋಂ ತಿಪ್ಪೇಶ್, ವಿಜಯ್ ಕುಮಾರ್ ಕೋಂ ಬಿನ್ ಮಲ್ಲೇಶಪ್ಪ ಆರ್, ಸುನೀತ ಸಿ.ಎಮ್ ಕೋಂ ಪ್ರಭಾಕರ್	3/19	00-18.00	-	0-01.08	-	ಖುಷ್ಕಿ	ವಿಜನಿನಿ	ಉಳಿಕೆ	ಸನಂ. 3/11	ಸನಂ. 3/20	
12	ಲಕ್ಷ್ಮಮ್ಮ ಬಿನ್ ಲೇ. ಕಲ್ಲಪ್ಪ ಕಲ್ಯಾಣಮ್ಮ ಬಿನ್ ಲೇ. ಕಲ್ಲಪ್ಪ ದಶರಥ ಬಿನ್ ಲೇ. ಕಲ್ಲಪ್ಪ ಕಲ್ಲೇಶಪ್ಪ ಬಿನ್ ಲೇ. ಕಲ್ಲಪ್ಪ ತಿಮ್ಮೇಶ್ ಬಿನ್ ಲೇ. ಕಲ್ಲಪ್ಪ	ಲಕ್ಷ್ಮಮ್ಮ ಬಿನ್ ಲೇ. ಕಲ್ಲಪ್ಪ ಕಲ್ಯಾಣಮ್ಮ ಬಿನ್ ಲೇ. ಕಲ್ಲಪ್ಪ ದಶರಥ ಬಿನ್ ಲೇ. ಕಲ್ಲಪ್ಪ ಕಲ್ಲೇಶಪ್ಪ ಬಿನ್ ಲೇ. ಕಲ್ಲಪ್ಪ ತಿಮ್ಮೇಶ್ ಬಿನ್ ಲೇ. ಕಲ್ಲಪ್ಪ	5/8	02-08.00	0-06.00	0-08.00	0-04.00	ಬಾಗಾಯ್ತು	ಸನಂ.14	ಹಳ್ಳ	5/8 ಉಳಿಕೆ	5/11	
13	ಸಿ.ಸಿ ಕಲ್ಲೇಶಪ್ಪ ಬಿನ್ ಲೇಟ್ ಚಂದ್ರಪ್ಪ , ಸಿ. ಹೇಮಾವತಿ ಬಿನ್ ಲೇಟ್ ಚಂದ್ರಪ್ಪ, ಸಿ.ಸಿ. ಶಿವಮೂರ್ತಿ	ಸಿ.ಸಿ ಕಲ್ಲೇಶಪ್ಪ ಬಿನ್ ಲೇಟ್ ಚಂದ್ರಪ್ಪ , ಸಿ. ಹೇಮಾವತಿ ಬಿನ್ ಲೇಟ್ ಚಂದ್ರಪ್ಪ,	9/1		-	0-05.04		ಖುಷ್ಕಿ	ರಸ್ತೆ	ಉಳಿಕೆ	ಉಳಿಕೆ	ರಸ್ತೆ	

	ಬಿನ್ ಲೇಟ್ ಚಂದ್ರಪ್ಪ (ಜಂಟಿ)	ಸಿ.ಸಿ. ಶಿವಮೂರ್ತಿ ಬಿನ್ ಲೇಟ್ ಚಂದ್ರಪ್ಪ (ಜಂಟಿ)		05-38.00									
14	ಸಿ. ಬಸವರಾಜಪ್ಪ ಬಿನ್ ಚನ್ನಬಸಪ್ಪ	ಸಿ. ಬಸವರಾಜಪ್ಪ ಬಿನ್ ಚನ್ನಬಸಪ್ಪ	202/4	00-17.00	-	00-17.00		ಖುಷ್ಕಿ	ಉಳಿಕೆ	ಉಳಿಕೆ	ಸನಂ. 11	ಸನಂ .3/20	
15	ತಿಪ್ಪೇಶಪ್ಪ ಬಿನ್ ನಿಂಗಪ್ಪ	ತಿಪ್ಪೇಶಪ್ಪ ಬಿನ್ ನಿಂಗಪ್ಪ	202/5	00-32.00	-	0-06.04		ಖುಷ್ಕಿ	ಉಳಿಕೆ	ಉಳಿಕೆ	ಸನಂ. 11	ಸನಂ. 3/20	
16	ಕೆ. ತಿಮ್ಮಯ್ಯ ಬಿನ್ ಕಲ್ಲಪ್ಪ	ಕೆ. ತಿಮ್ಮಯ್ಯ ಬಿನ್ ಕಲ್ಲಪ್ಪ	202/8	00-25.00	-	00-10.08		ಖುಷ್ಕಿ	ಸನಂ. 5/7	ರಸ್ತೆ	ಉಳಿಕೆ	ಉಳಿಕೆ	
17	ಈಶ್ವರಪ್ಪ ಬಿನ್ ಕಲ್ಲಪ್ಪ	ಈಶ್ವರಪ್ಪ ಬಿನ್ ಕಲ್ಲಪ್ಪ	202/9	0-25.00	-	0-03.00		ಖುಷ್ಕಿ	ವಿಜನಿನಿ	ಉಳಿಕೆ	ಲಾಹಿ. 8	ಲಾಹಿ.10	
18	ಸಿ.ಎಂ. ರಮೇಶಪ್ಪ ಬಿನ್ ಮರುಳಸಿದ್ಧಪ್ಪ	ಸಿ.ಎಂ. ರಮೇಶಪ್ಪ ಬಿನ್ ಮರುಳಸಿದ್ಧಪ್ಪ	202/10	00-32.00	-	00-04.00		ಖುಷ್ಕಿ	ಸನಂ. 232	ಉಳಿಕೆ	ಸನಂ. 202/9	ಸನಂ. 201	
19	ಜಯಮ್ಮ ಕೋಂ ರಾಮಸ್ವಾಮಿ	ಜಯಮ್ಮ ಕೋಂ ರಾಮಸ್ವಾಮಿ	202/11	00-10.00	-	00-08.00		ಖುಷ್ಕಿ	ಸನಂ. 202/17	ಉಳಿಕೆ	ಸನಂ. 213/11	ಸನಂ. 206	
20	ಈರಣ್ಣ ರೇವಣ್ಣ ಬಿನ್ ಕಲ್ಲಪ್ಪ	ಈರಣ್ಣ ರೇವಣ್ಣ ಬಿನ್ ಕಲ್ಲಪ್ಪ	213/1	01-25.00	-	00-02.12		ಖುಷ್ಕಿ	ಸನಂ. 213/2	ವಿಜನಿನಿ	2/2	ಸನಂ. 2/3	
21	ಪರಮೇಶ್ವರಪ್ಪ ಬಿನ್ ನಿಂಗಪ್ಪ ಗುಲಮೆ ಜಯಮ್ಮ ಲೇ. ಗುಲಮೆ ಸಿದ್ರಾಮಪ್ಪ ಶಾಂತಮ್ಮ ಲೇ. ಅಂದಾನಪ್ಪ ಜಯಮ್ಮ ಲೇ. ಅಂದಾನಪ್ಪ ದೇವಿರಮ್ಮ ಲೇ. ಅಂದಾನಪ್ಪ, ಎ ಜಯಣ್ಣ ಲೇ. ಅಂದಾನಪ್ಪ, ಎ ಶಿವಮೂರ್ತಿ ಲೇ. ಅಂದಾನಪ್ಪ ಎ ಗವಿರಂಗಪ್ಪ ಲೇ. ಅಂದಾನಪ್ಪ ಕಲ್ಲಪ್ಪ	ಪರಮೇಶ್ವರಪ್ಪ ಬಿನ್ ನಿಂಗಪ್ಪ ಗುಲಮೆ ಜಯಮ್ಮ ಲೇ. ಗುಲಮೆ ಸಿದ್ರಾಮಪ್ಪ ಶಾಂತಮ್ಮ ಲೇ. ಅಂದಾನಪ್ಪ ಜಯಮ್ಮ ಲೇ. ಅಂದಾನಪ್ಪ ದೇವಿರಮ್ಮ ಲೇ. ಅಂದಾನಪ್ಪ, ಎ ಜಯಣ್ಣ ಲೇ. ಅಂದಾನಪ್ಪ, ಎ ಶಿವಮೂರ್ತಿ ಲೇ. ಅಂದಾನಪ್ಪ ಎ ಗವಿರಂಗಪ್ಪ ಲೇ. ಅಂದಾನಪ್ಪ ಕಲ್ಲಪ್ಪ	213	04-38.00	-	0-06.00		ಖುಷ್ಕಿ	ಸನಂ. 213/2 ಉಳಿಕೆ	ಸನಂ. 213/2 ವಿಜನಿನಿ	213/1	ಸನಂ. 213/3	
22	ಸಿ.ವಿ. ಗಂಗಾಧರಪ್ಪ ಬಿನ್ ಸಿ.ಕೆ. ಈರಣ್ಣ ಯಾನೆ ಸಿ. ಕೆ. ಈರಪ್ಪ ಯಾನೆ ವೀರಪ್ಪ ಸಿ	ಸಿ.ವಿ. ಗಂಗಾಧರಪ್ಪ ಬಿನ್ ಸಿ.ಕೆ. ಈರಣ್ಣ ಯಾನೆ ಸಿ. ಕೆ. ಈರಪ್ಪ ಯಾನೆ ವೀರಪ್ಪ ಸಿ	215/4	00-26.00	-	00-02.08		ಖುಷ್ಕಿ	ಸನಂ. 215/4 ವಿಜನಿನಿ	ಉಳಿಕೆ 215/4	ಉಳಿಕೆ 215/4	ಸನಂ.215 5/2	
23	ಪಾಲಾಕ್ಷಮ್ಮ ಕೋಂ. ಲೇ. ಸಿ.ಎನ್. ಕುಮಾರಪ್ಪ	ಪಾಲಾಕ್ಷಮ್ಮ ಕೋಂ. ಲೇ. ಸಿ.ಎನ್. ಕುಮಾರಪ್ಪ	217/2	00-17.00	-	00-09.00		ಖುಷ್ಕಿ	ಲಾ.ಹಿ. 3	ಉಳಿಕೆ ವಿಜನಿನಿ	ಲಾ.ಹಿ. 1	ಲಾ.ನಂ. 216	
24	ಸಿ. ಕೆ.ಚಂದ್ರಶೇಖರ್ ಬಿನ್ ಲೇ. ಬಿ. ಕಲ್ಲಪ್ಪ	ಸಿ. ಕೆ.ಚಂದ್ರಶೇಖರ್ ಬಿನ್ ಲೇ. ಬಿ. ಕಲ್ಲಪ್ಪ	218/2	00-34.00	-	00-02.04		ಖುಷ್ಕಿ	218/2	ಸನಂ.	ಸನಂ	ಸನಂ.	

25	ಬಿ.ಎನ್. ಸಾಕಮ್ಮ ಬಿನ್ ದಿ|| ನಿಂಗಪ್ಪ	ಬಿ.ಎನ್. ಸಾಕಮ್ಮ ಬಿನ್ ದಿ|| ನಿಂಗಪ್ಪ	230/1	01-24.00	0-01.00	0-06.00		ಖುಷ್ಕಿ	ಸನಂ. 230/1	ಸನಂ .230/1 ಉಳಿಕೆ ವಿಜನಿನಿ	ಸನಂ. 231	ಸನಂ. 230/1 ವಿಜನಿನಿ	
26	ತಿಪ್ಪೇಶಪ್ಪ ಯಾನೆ ನಾಗರಾಜಪ್ಪ	ತಿಪ್ಪೇಶಪ್ಪ ಯಾನೆ ನಾಗರಾಜಪ್ಪ	231/1ಎ	1-03.00	0-01.00	0-08.00	0-01.00	ಖುಷ್ಕಿ	ಲಾ.ಹಿ. 231/10	ಲಾ.231/1 ಎ	ಲಾ.ಹಿ. 233	ಲಾ.ಹಿ. 233/3	
27	ಸಿ.ಎಸ್.ಮಂಜುನಾಥ ಬಿನ್ ಲೇ. ಸಿ.ಬಿ.ಸಿದ್ದಪ್ಪ	ಸಿ.ಎಸ್.ಮಂಜುನಾಥ ಬಿನ್ ಲೇ. ಸಿ.ಬಿ. ಸಿದ್ದಪ್ಪ	231/1ಬಿ	0-20.00	0-01.00	0-04.00	0-01.00	ಖುಷ್ಕಿ	ಲಾ.ಹಿ. 231/3	ಲಾ. 231/1ಬಿ ಉಳಿಕೆ	ಲಾ.ಹಿ. 231/ಎ	ಲಾ.ಹಿ. 230	
28	ಪಾರ್ವತಮ್ಮ ಲೋಕೇಶಪ್ಪ ಕೃಷ್ಣಮೂರ್ತಿ ಪ್ರಕಾಶ	ಪಾರ್ವತಮ್ಮ ಲೋಕೇಶಪ್ಪ ಕೃಷ್ಣಮೂರ್ತಿ ಪ್ರಕಾಶ	231/3	0-20.00	-	0-06.00		ಖುಷ್ಕಿ	ಲಾ.ಹಿ. 231/3 ಉಳಿಕೆ	ಲಾ. 231/1ಬಿ	ಲಾ.ಹಿ. 231/1 ಎ	ಲಾ.ಹಿ. 230	
29	ಕುಮಾರಿ ಆಶಾ ಬಿನ್ ಎಸ್. ತಮ್ಮಯ್ಯ	ಕುಮಾರಿ ಆಶಾ ಬಿನ್ ಎಸ್. ತಮ್ಮಯ್ಯ	237/11	0-14.00	-	0-00.08		ಖುಷ್ಕಿ	ಸನಂ. 237/1 ಉಳಿಕೆ	ಸನಂ. 237/13 ವಿಜನಿನಿ	ಸನಂ. 237/1	237/13	
30	ನಾಗಪ್ಪ ಬಿನ್ ರುದ್ರಪ್ಪ	ನಾಗಪ್ಪ ಬಿನ್ ರುದ್ರಪ್ಪ	237/13	0-25.08	-	0-4.08		ಖುಷ್ಕಿ	ಉಳಿಕೆ 237/13	ಸನಂ. 237/13 ವಿಜನಿನಿ	ಸನಂ. 237/1 1	ಸನಂ. 237/4	
31	ಆರ್. ಲಲಿತಮ್ಮ ಕೋಂ. ಸಿ.ಆರ್. ಏಕಾಂತಪ್ಪ	ಆರ್. ಲಲಿತಮ್ಮ ಕೋಂ. ಸಿ.ಆರ್. ಏಕಾಂತಪ್ಪ	238/6	0-06.00	-	0-5.08		ಖುಷ್ಕಿ	ಲಾ.ಹಿ. 238/6 ವಿಜನಿನಿ	ಲಾ.ಹಿ.	ಲಾ.ಹಿ. 6 ಉಳಿಕೆ	ಲಾ.ಹಿ. 8	
32	ಲಲಿತಮ್ಮ ಕೋಂ. ಸಿ.ಆರ್. ಏಕಾಂತಪ್ಪ	ಲಲಿತಮ್ಮ ಕೋಂ. ಸಿ.ಆರ್. ಏಕಾಂತಪ್ಪ	238/11	0-12.00	-	0-06.00		ಖುಷ್ಕಿ	ಲಾ.ಹಿ. 238/11 ವಿಜನಿನಿ	ಲಾ.ಹಿ. 4	ಲಾ.ಹಿ. 5	ಲಾ.ಹಿ. 6	
33	ಬಿ. ಮಲ್ಲಪ್ಪ ಬಿನ್ ಸಣ್ಣಬಸಪ್ಪ	ಬಿ. ಮಲ್ಲಪ್ಪ ಬಿನ್ ಸಣ್ಣಬಸಪ್ಪ	238/14	0-20.00		0-03.00		ಖುಷ್ಕಿ	ಸನಂ .237/9	237/8	ಸನಂ. 238/14 ವಿಜನಿನಿ	238/14 ಉಳಿಕೆ	
						0-03.00		ಬಾಗಾಯ್ತು					
ಒಟ್ಟು						**05-03.08**	**00-07.00**						

ಉಪವಿಭಾಗಾಧಿಕಾರಿ ಹಾಗೂ
ಭೂಸ್ವಾಧೀನಾಧಿಕಾರಿ
ತರೀಕೆರೆ ಉಪವಿಭಾಗ, ತರೀಕೆರೆ.

ಜಿಲ್ಲಾಧಿಕಾರಿಗಳು
ಚಿಕ್ಕಮಗಳೂರು ಜಿಲ್ಲೆ,
ಚಿಕ್ಕಮಗಳೂರು

PR-30

ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕು, ಚೌಳಹಿರಿಯೂರು ಹೋಬಳಿ ಹಿರೇಬಳ್ಳೇಕೆರೆ, ಹಿರೇನಲ್ಲೂರು ಹೊಬಳಿ ಅರೇಹಳ್ಳಿ ಮತ್ತು ಯಗಟಿ ಹೋಬಳಿ ಖಂಡುಗದಹಳ್ಳಿ ಗ್ರಾಮಗಳ ಒಟ್ಟು 02-35.04 ಎಕರೆ ಭದ್ರಾ ಮೇಲ್ದಂಡೆ ಯೋಜನೆಯ ತುಮಕೂರು ಶಾಖಾ ಕಾಲುವೆಯ ಕಾಮಗಾರಿಗಾಗಿ ಹನಿ ನೀರಾವರಿ ಪ್ಯಾಕೇಜ್-01ರ ಕಾಮಗಾರಿಗಾಗಿ ನೇರ ಖರೀದಿಗೆ, ಭೂಸ್ವಾಧೀನ ಕಾಯ್ದೆ 2013ರ ಕಲಂ 30(ಎ) (2) ರಂತೆ ಅಧಿಸೂಚನೆ.

ಕೊಡುಗೆಯ ಮುಖಪುಟ

ಸಂಖ್ಯೆಃಎಲ್ಎಕ್ಯೂ/ಸಿಆರ್/ಇ-ಆಫೀಸ್/263184/452804/2023-24 ದಿನಾಂಕ:13.11.2025

ಉಪಸ್ಥಿತರುಃ ನಟೇಶ್ ಎನ್.ವಿ.
ಉಪವಿಭಾಗಾಧಿಕಾರಿಗಳು ಹಾಗೂ
ಭೂಸ್ವಾಧೀನಾಧಿಕಾರಿಗಳು
ಕಂದಾಯ ಉಪವಿಭಾಗ
ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು

ಉಪವಿಭಾಗಾಧಿಕಾರಿಗಳು ಹಾಗೂ ಭೂಸ್ವಾಧೀನಾಧಿಕಾರಿ, ಕಂದಾಯ ಉಪವಿಭಾಗ, ತರೀಕೆರೆ ಆದ ನಾನು ಭೂಸ್ವಾಧೀನ ಕಾಯ್ದೆ 2013ರ ಕಲಂ 30(ಎ)ರಂತೆ ಜಮೀನನ್ನು ನೇರಖರೀದಿಯ ಮೂಲಕ **ಕಡೂರು ತಾಲ್ಲೂಕು ಚೌಳಹಿರಿಯೂರು ಹೋಬಳಿ ಹಿರೇಬಳ್ಳೇಕೆರೆ ಗ್ರಾಮದ ಒಟ್ಟು 01-00.00 ಎಕರೆ, ಹಿರೇನಲ್ಲೂರು ಹೋಬಳಿ ಅರೇಹಳ್ಳಿ ಗ್ರಾಮದ ಒಟ್ಟು 00-30.00 ಎಕರೆ ಮತ್ತು ಯಗಟಿ ಹೋಬಳಿ ಖಂಡುಗದಹಳ್ಳಿ ಗ್ರಾಮದ 01-02.00 ಎಕರೆ ಒಟ್ಟು 02-35.04 ಎಕರೆ** ಜಮೀನು **ಭದ್ರಾ ಮೇಲ್ದಂಡೆ ಯೋಜನೆಯ ತುಮಕೂರು ಶಾಖಾ ಕಾಲುವೆಯ** ಕಾಮಗಾರಿಗಾಗಿ ಹನಿ ನೀರಾವರಿ ಪ್ಯಾಕೇಜ್-01ರ ಕಾಮಗಾರಿಗಾಗಿ ಅಗತ್ಯವಿದ್ದು ಭೂಸ್ವಾಧೀನಪಡಿಸಿಕೊಳ್ಳಲು ಕಾರ್ಯಪಾಲಕ ಅಭಿಯಂತರರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಭದ್ರಾ ಮೇಲ್ದಂಡೆ ಯೋಜನೆ ವಿಭಾಗ ನಂ.1, ಕಡೂರು ಇವರು ಕೋರಿದ್ದು, ಸದರಿ ಭೂಸ್ವಾಧೀನವು ಭದ್ರಾ ಮೇಲ್ದಂಡೆ ಯೋಜನೆಯ ತುಮಕೂರು ಶಾಖಾ ಕಾಲುವೆಯ ಕಾಮಗಾರಿಗಾಗಿ ಹನಿ ನೀರಾವರಿ ಪ್ಯಾಕೇಜ್-01ರ ಕಾಮಗಾರಿಗಾಗಿ ಅಗತ್ಯ ಇರುವುದರಿಂದ ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಇವರ ಪತ್ರದ ಸಂಖ್ಯೆಃ ಎಲ್ಎಕ್ಯೂಸಿಆರ್/23-24/ಇ-ಆಫೀಸ್/452804 ದಿ:24-06-2024ರಲ್ಲಿ ಭೂಸ್ವಾಧೀನ ಕಾಯಿದೆ 2013 ರ ಕಲಂ-30(ಎ)ರಂತೆ ನೇರ ಖರೀದಿ ಮೂಲಕ ಖರೀದಿಸಲು ಅಧಿಸೂಚನೆ ತಯಾರಿಸುವಂತೆ ನಿರ್ದೇಶನ ನೀಡಿರುತ್ತಾರೆ. ಈ ಹಿನ್ನೆಲೆಯಲ್ಲಿ ನೇರ ಖರೀದಿ ಪ್ರಕ್ರಿಯೆ ಕೈಗೊಂಡಿರುತ್ತೇನೆ.

ಸದರಿ ನೇರ ಖರೀದಿ ಪ್ರಸ್ತಾವನೆಗೆ ಮಾಲೀಕರು/ರೈತರಿಂದ ನೇರವಾಗಿ ಖರೀದಿಸುವ ಉದ್ದೇಶದಿಂದ ಮಾನ್ಯ ಜಿಲ್ಲಾಧಿಕಾರಿಗಳು ಇವರ ಅಧ್ಯಕ್ಷತೆಯಲ್ಲಿ ದಿ:25-05-2025ರಂದು ಜಿಲ್ಲಾದರ ನಿರ್ಧರಣಾ ಸಲಹಾ ಸಮಿತಿಯನ್ನು ರಚಿಸಲಾಗಿರುತ್ತದೆ.

ಕಡೂರು ತಾಲ್ಲೂಕು, ಚೌಳಹಿರಿಯೂರು ಹೋಬಳಿ, ಹಿರೇಬಳ್ಳೇಕೆರೆ ಗ್ರಾಮದ ಜಮೀನು ಭೂಸ್ವಾಧೀನಗೊಳ್ಳುವ **ಒಟ್ಟು 01-00.00** ಎಕರೆ ವಿಸ್ತೀರ್ಣ ಜಮೀನಿನ ಬೆಲೆ.

1. ಜಿಲ್ಲಾಧಿಕಾರಿಗಳ ಆದೇಶ ಸಂಖ್ಯೆಃ ಎಲ್‌ಎಕ್ಯೂಸಿಆರ್/23-24/ಇ-ಆಫೀಸ್/452804 ದಿ:24-06-2024 ಮತ್ತು ಉಪನೋಂದಣಾಧಿಕಾರಿಗಳು ನೀಡಿರುವ ಮಾರ್ಗಸೂಚಿದರ ಪೂರ್ವದ 3 ವರ್ಷಗಳಲ್ಲಿ ಜಮೀನುಗಳ ಕ್ರಯವಹಿವಾಟುಗಳ ದರಗಳಂತೆ ನಿರ್ಣಯಿಸಿರುವ ಸರಾಸರಿ ಮಾರುಕಟ್ಟೆದರದಂತೆ.
2. ತೋಟಗಾರಿಕೆ ಬೆಳೆಯ ಬೆಲೆಯನ್ನು ತೋಟಗಾರಿಕೆ ಇಲಾಖೆಯವರು ನಿಗದಿಪಡಿಸಿರುವಂತೆ.
3. ಕೊಳವೆ ಬಾವಿ ಮೌಲ್ಯ ಮಾಪನವನ್ನು ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ ಕಡೂರು ಇವರಿಂದ ಪಡೆಯಲಾಗಿದೆ.
4. ಬೆಲೆ ಬಾಳುವ ಮರಗಳು ಮತ್ತು ಕಟ್ಟಡಗಳು ಇರುವುದಿಲ್ಲ.

ಕಡೂರು ತಾಲ್ಲೂಕು ಹಿರೇನಲ್ಲೂರು ಹೊಬಳಿ ಅರೇಹಳ್ಳಿ, ಗ್ರಾಮದ ಜಮೀನು ಭೂಸ್ವಾಧೀನಗೊಳ್ಳುವ **ಒಟ್ಟು 00-30.00 ಎಕರೆ** ವಿಸ್ತೀರ್ಣ ಜಮೀನಿನ ಬೆಲೆ.

1. ಜಿಲ್ಲಾಧಿಕಾರಿಗಳ ಆದೇಶ ಸಂಖ್ಯೆಃ ಎಲ್‌ಎಕ್ಯೂಸಿಆರ್/23-24/ಇ-ಆಫೀಸ್/368012 ದಿ:24-06-2024 ಮತ್ತು ಉಪನೋಂದಣಾಧಿಕಾರಿಗಳು ನೀಡಿರುವ ಮಾರ್ಗಸೂಚಿದರ ಪೂರ್ವದ 3 ವರ್ಷಗಳಲ್ಲಿ ಜಮೀನುಗಳ ಕ್ರಯವಹಿವಾಟುಗಳ ದರಗಳಂತೆ ನಿರ್ಣಯಿಸಿರುವ ಸರಾಸರಿ ಮಾರುಕಟ್ಟೆದರದಂತೆ.
2. ತೋಟಗಾರಿಕೆ ಬೆಳೆಯ ಬೆಲೆಯನ್ನು ತೋಟಗಾರಿಕೆ ಇಲಾಖೆಯವರು ನಿಗದಿಪಡಿಸಿರುವಂತೆ.
3. ಕೊಳವೆ ಬಾವಿ ಮೌಲ್ಯ ಮಾಪನವನ್ನು ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ ಕಡೂರು ಇವರಿಂದ ಪಡೆಯಲಾಗಿದೆ.
4. ಬೆಲೆ ಬಾಳುವ ಮರಗಳು ಮತ್ತು ಕಟ್ಟಡಗಳು ಇರುವುದಿಲ್ಲ.

ಕಡೂರು ತಾಲ್ಲೂಕು ಯಗಟಿ ಹೋಬಳಿ ಖಂಡುಗದಹಳ್ಳಿ, ಗ್ರಾಮದ ಭೂಸ್ವಾಧೀನಗೊಳ್ಳುವ **ಒಟ್ಟು 01-02.00 ಎಕರೆ** ವಿಸ್ತೀರ್ಣ ಜಮೀನಿನ ಬೆಲೆ.

1.ಜಿಲ್ಲಾಧಿಕಾರಿಗಳ ಆದೇಶ ಸಂಖ್ಯೆಃ ಎಲ್‌ಎಕ್ಯೂಸಿಆರ್/23-24/ಇ-ಆಫೀಸ್/263184 ದಿ:22-01-2024 ಮತ್ತು ಉಪನೋಂದಣಾಧಿಕಾರಿಗಳು ನೀಡಿರುವ ಮಾರ್ಗಸೂಚಿದರ ಪೂರ್ವದ 3 ವರ್ಷಗಳಲ್ಲಿ ಜಮೀನುಗಳ ಕ್ರಯವಹಿವಾಟುಗಳ ದರಗಳಂತೆ ನಿರ್ಣಯಿಸಿರುವ ಸರಾಸರಿ ಮಾರುಕಟ್ಟೆದರದಂತೆ.
2. ತೋಟಗಾರಿಕೆ ಬೆಳೆಯ ಬೆಲೆಯನ್ನು ತೋಟಗಾರಿಕೆ ಇಲಾಖೆಯವರು ನಿಗದಿಪಡಿಸಿರುವಂತೆ
3. ಕೊಳವೆ ಬಾವಿ ಮೌಲ್ಯ ಮಾಪನವನ್ನು ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ ಕಡೂರು ಇವರಿಂದ ಪಡೆಯಲಾಗಿದೆ.
4. ಬೆಲೆ ಬಾಳುವ ಮರಗಳು ಮತ್ತು ಕಟ್ಟಡಗಳು ಇರುವುದಿಲ್ಲ

ಮಾನ್ಯ ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂಸ್ವಾ-2), ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು ಇವರ ಪತ್ರದ ಸಂ: **R.D 58 Bhuswaha 2014 dt:03/05/2014** ರ ಸುತ್ತೋಲೆಯಲ್ಲಿನ ಸೂಚನೆಯಂತೆ ಕಡೂರು ಪುರಸಭೆ ವ್ಯಾಪ್ತಿಯಿಂದ **ಹಿರೇಬಳ್ಳೇಕೆರೆ**, **ಅರೇಹಳ್ಳಿ, ಖಂಡುಗದಹಳ್ಳಿ** ಗ್ರಾಮಗಳು 5.00 ಕಿ.ಮೀ.ಗಿಂತ ದೂರದಲ್ಲಿದ್ದು 2.0 ಪಟ್ಟುಬೆಲೆಯನ್ನು ನಿರ್ಧರಿಸಲಾಗಿರುತ್ತದೆ.

ಭೂಸ್ವಾಧೀನ ಕಾಯ್ದೆ ಕಲಂ 26 ರ ಪ್ರಕಾರ ಮಾರ್ಗಸೂಚಿ ಬೆಲೆ ಅಥವಾ ಮಾರಾಟದ ಸರಾಸರಿ ಮಾರುಕಟ್ಟೆಬೆಲೆ ಇವುಗಳಲ್ಲಿ ಯಾವುದು ಹೆಚ್ಚಾಗುತ್ತದೆಯೋ ಆ ಬೆಲೆಯನ್ನು ಪರಿಗಣಿಸಬೇಕಾಗಿರುವುದರಿಂದ ಪ್ರಸಕ್ತ ಪ್ರಕರಣದಲ್ಲಿ ನೇರ ಖರೀದಿ ಪರಿಹಾರಾರ್ಥಿಗಳಿಗೆ ಖುಷ್ಕಿ ಜಮೀನಿನ ಮಾರಾಟದ ಸರಾಸರಿ ದರವನ್ನು ಪರಿಗಣಿಸಿರುತ್ತದೆ.

ಉಪವಿಭಾಗಾಧಿಕಾರಿಗಳು ಹಾಗೂ ಭೂಸ್ವಾಧೀನಾಧಿಕಾರಿಗಳ ಕಛೇರಿ,ಕಂದಾಯ ಉಪವಿಭಾಗ,ತರೀಕೆರೆ

ಸಂಖ್ಯೆಃಎಲ್ಎಕ್ಯೂ/ಸಿಆರ್/ಇ-ಆಫಿಸ್/263184/452804/2023-24 ದಿನಾಂಕ:13.11.2025

ಉಪಸ್ಥಿತರುಃ ನಟೇಶ್ ಎನ್.ವಿ.
ಉಪವಿಭಾಗಾಧಿಕಾರಿಗಳು ಹಾಗೂ
ಭೂಸ್ವಾಧೀನಾಧಿಕಾರಿಗಳು
ಕಂದಾಯ ಉಪವಿಭಾಗ
ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು
ಜಿಲ್ಲೆ

ನೇರ ಖರೀದಿ ಒಪ್ಪಂದದ ವಿವರ

ವಿಷಯಃ- ಉಪವಿಭಾಗಾಧಿಕಾರಿಗಳು ಹಾಗೂ ಭೂಸ್ವಾಧೀನಾಧಿಕಾರಿ, ಕಂದಾಯ ಉಪವಿಭಾಗ, ತರೀಕೆರೆ ಆದ ನಾನು ಭೂಸ್ವಾಧೀನ ಕಾಯ್ದೆ 2013ರ ಕಲಂ 30(ಎ)ರಂತೆ ಜಮೀನನ್ನು ನೇರವಾಗಿ **ಕಡೂರು ತಾಲ್ಲೂಕು, ಚೌಳಹಿರಿಯೂರು ಹೋಬಳಿ, ಹಿರೇಬಳ್ಳೇಕೆರೆ ಗ್ರಾಮದ ಜಮೀನು ಒಟ್ಟು 01-00.00 ಎಕರೆ ಮತ್ತು ಹಿರೇನಲ್ಲೂರು ಹೊಬಳಿ, ಅರೇಹಳ್ಳಿ ಗ್ರಾಮದ ಒಟ್ಟು 00-30.00 ಎಕರೆ ಮತ್ತು ಯಗಟಿ ಹೋಬಳಿ, ಖಂಡುಗದಹಳ್ಳಿ ಗ್ರಾಮದ 01-02.00 ಎಕರೆ ಒಟ್ಟು 02-35.04 ಎಕರೆ** ಜಮೀನು **ಭದ್ರಾ ಮೇಲ್ದಂಡೆ ಯೋಜನೆಯ ತುಮಕೂರು ಶಾಖಾ ಕಾಲುವೆಯ** ಕಾಮಗಾರಿಗಾಗಿ ಹನಿ ನೀರಾವರಿ ಪ್ಯಾಕೇಜ್-01ರ ಕಾಮಗಾರಿಗಾಗಿ ಅಗತ್ಯವಿದ್ದು ಭೂಸ್ವಾಧೀನಪಡಿಸಿಕೊಳ್ಳಲು ಕಾರ್ಯಪಾಲಕ ಅಭಿಯಂತರರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಭದ್ರಾ ಮೇಲ್ದಂಡೆ ಯೋಜನೆ ವಿಭಾಗ ನಂ.1, ಕಡೂರು ಇವರು ಕೋರಿದ್ದು, ಸದರಿ ಭೂಸ್ವಾಧೀನವು ಭದ್ರಾ ಮೇಲ್ದಂಡೆ ಯೋಜನೆಯ ತುಮಕೂರು ಶಾಖಾ ಕಾಲುವೆಯ ಕಾಮಗಾರಿಗಾಗಿ ಹನಿ ನೀರಾವರಿ ಪ್ಯಾಕೇಜ್-01ರ ಕಾಮಗಾರಿಗಾಗಿ ಅಗತ್ಯ ಇರುವುದರಿಂದ ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಇವರ ಪತ್ರದ ಸಂಖ್ಯೆಃ ಎಲ್ಎಕ್ಯೂಸಿಆರ್/23-24/ಇ-ಆಫಿಸ್/452804 ದಿ:24-06-2024 ರಲ್ಲಿ ಭೂಸ್ವಾಧೀನ ಕಾಯಿದೆ 2013 ರ ಕಲಂ-30(ಎ)ರಂತೆ ನೇರಖರೀದಿ ಮೂಲಕ ಕೊಳ್ಳಲು ಅಧಿಸೂಚನೆ ತಯಾರಿಸುವಂತೆ ನಿರ್ದೇಶನ ನೀಡಿರುತ್ತಾರೆ. ಈ ಹಿನ್ನೆಲೆಯಲ್ಲಿ ನೇರ ಖರೀದಿ ಪ್ರಕ್ರಿಯೆ ಕೈಗೊಂಡಿರುತ್ತೇನೆ.

ಉಲ್ಲೇಖ:-

1. ಸರ್ಕಾರದ ಆದೇಶ ಸಂ. ಕಂಇ 54 ಭೂಸ್ವಾಳ2014 ಬೆಂಗಳೂರು, ದಿ:31/05/2016.
2. ಕಾರ್ಯಪಾಲಕ ಇಂಜಿನಿಯರ್ ಭಮೇಯೋ ವಿಭಾಗ 01 ಕಡೂರು ಇವರ ಪತ್ರ ಸಂ. ಕಾಇಂ/ವಿಜನಿನಿ/ಭಮೇಯೋ/ವಿನಂ-01/PB-1/2023-24/666 ದಿ:26/09/2023.
3. ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ಇವರ ಪತ್ರ ಸಂ.LAQCR/2023-24 E-office 263184 ದಿ:22/01/2024.
4. ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ಇವರ ಪತ್ರ ಸಂ.LAQCR/2023-24 E-office 452804 ದಿ:24/06/2024.
5. ಭೂದಾಖಲೆಗಳ ಸಹಾಯಕ ನಿರ್ದೇಶಕರು ಕಡೂರು ಇವರ ಪತ್ರ ಸಂ. ಭೂಸನಿ /ನೇರಖರೀದಿ /ಸಂ.616/2024-25 ದಿ:09/05/2024.
6. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ ಕಡೂರು ಇವರ ಪತ್ರ ಸಂ.ಸಕಾಇಂಕುನೀಸ&ನೈ.ಉ.ವಿ.ಕ/ಅಂಪ/2024-25/93 ದಿ:28/06/2024 ಮತ್ತು 155 ದಿ:25-09-2024.
7. ತೋಟಗಾರಿಕೆ ಉಪನಿರ್ದೇಶಕರು ಚಿಕ್ಕಮಗಳೂರು ಇವರ ಪತ್ರ ಸಂ. ತೋಉನಿ/ಜಿಪಂಚಿ/ತಾಸ- 5/2024-25/162 ದಿ:03/08/2024 ಮತ್ತು ಪತ್ರ ಸಂ.340 ದಿ:15-11-2024.

8.ಉಪನೋಂದಣಾಧಿಕಾರಿಗಳು ಕಡೂರು ಇವರ ಕ್ರಯವಹಿವಾಟು ವರದಿ ಸ್ವೀಕೃತಿ ದಿ:24/10/2024 ಮತ್ತು ದಿ:22-01-2025.
9.ಸಹಾಯಕ ಕಾರ್ಯಪಾಲಕ ಅಭಿಯಂತರರು ಕಡೂರು ಇವರ ಪತ್ರ ಸಂ.ಕಸ.ಕಾ.ಇಂ. ನಂ5ನೇಲೋ, ಉಪವಿಭಾಗ ಕಡೂರು ಎಇ2ಸಂಪ್ 2020-21/B06 ದಿ:07/09/2021 ಮತ್ತು ಪತ್ರ ಸಂ.568 ದಿ:29-01-2025.
10.ಈ ಕಛೇರಿಯ ಪತ್ರ ಸಂ.LACQR E-office 2631811/2023-24 ದಿ:27/01/2025.
11. ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ಇವರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾದರ ನಿರ್ಧರಣಾ ಸಲಹಾ ಸಮಿತಿಯ ನಡಾವಳಿ ದಿ:25/05/2025.
12.ಈ ಕಛೇರಿಯ ಪ್ರಸ್ತಾವನೆ ಸಂ.LACQR/E-office/263184/2023-24 ದಿ:30/05/2025.
13.ವ್ಯವಸ್ಥಾಪಕ ನಿರ್ದೇಶಕರು VJNL ಇವರ ಪತ್ರ ಸಂ. CAO/CR/13/225-26/213 ದಿ:11/06/2025.

ಪ್ರಸ್ತಾವನೆ:

ಭದ್ರಾ ಮೇಲ್ದಂಡೆ ಯೋಜನೆ ತುಮಕೂರು ಶಾಖಾ ಕಾಲುವೆ ಕಾಮಗಾರಿಯಡಿ ಬರುವ ಹನಿ ನೀರಾವರಿ ಪ್ಯಾಕೇಜ್-01ರ ಸಂಪ್ ಕಂ ಪಂಪ್ ಹೌಸ್ ಕಾಮಗಾರಿ ನಿರ್ಮಾಣಕ್ಕಾಗಿ ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕಿನ ಚೌಳಹಿರಿಯೂರು ಹೋಬಳಿ, ಹಿರೇಬಳ್ಳೇಕೆರೆ ಗ್ರಾಮ, ಹಿರೇನಲ್ಲೂರು ಹೋಬಳಿ, ಅರೇಹಳ್ಳಿ ಗ್ರಾಮ ಮತ್ತು ಯಗಟಿ ಹೋಬಳಿ, ಖಂಡುಗದಹಳ್ಳಿ ಗ್ರಾಮಗಳಲ್ಲಿ ಸಂಪ್ ಕಂ ಪಂಪ್ ಹೌಸ್ ಕಾಮಗಾರಿ ಮತ್ತು ಸಮುದಾಯ ಭವನ ನಿರ್ಮಾಣ ಕಾಮಗಾರಿಗಳನ್ನು ಮಾಡಲಾಗುತ್ತಿದ್ದು ಇವುಗಳ ನಿರ್ಮಾಣಕ್ಕಾಗಿ ಅಗತ್ಯವಿರುವ ಕೃಷಿ ಜಮೀನನ್ನು ನೇರ ಖರೀದಿ ಮೂಲಕ ಪಡೆದುಕೊಂಡು ಹಸ್ತಾಂತರಿಸಲು ಕೋರಿಕೆ ಸಂಸ್ಥೆಯಾದ ವಿಶ್ವೇಶ್ವರಯ್ಯ ಜಲ ನಿಗಮ ಇವರು ಉಲ್ಲೇಖ (2) ರಂತೆ ಮನವಿ ಸಲ್ಲಿಸಿರುತ್ತಾರೆ. ಉಲ್ಲೇಖ(1)ರ ಸರ್ಕಾರದ ಆದೇಶದಂತೆ ಭೂಸ್ವಾಧೀನ ಪ್ರಕ್ರಿಯೆನಡೆಸುವಂತೆ ಉಲ್ಲೇಖ(3) ಮತ್ತು (4)ರಲ್ಲಿ ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ಇವರು ನಿರ್ದೇಶನ ನೀಡಿರುತ್ತಾರೆ. ಅದರಂತೆ ಉಲ್ಲೇಖ(5)ರಂತೆ ಭೂಸ್ವಾಧೀನಕ್ಕೆ ಅಗತ್ಯವಿರುವ ಜಮೀನಿನ ನಕ್ಷೆಯನ್ನು ಭೂದಾಖಲೆಗಳ ಸಹಾಯಕ ನಿರ್ದೇಶಕರು ಕಡೂರು ಇವರಿಂದ ವರದಿ ಪಡೆಯಲಾಗಿದೆ. ಭೂಸ್ವಾಧೀನ ಮತ್ತು ಭೂಸ್ವಾಧೀನಕ್ಕೆ ಒಳಪಡುವ ಗ್ರಾಮಗಳ ಜಮೀನಿನ ಸರ್ವೆ ನಂ.ಗಳ ವಿವರ ಹೀಗಿದೆ **ಕಡೂರು ತಾಲ್ಲೂಕು, ಚೌಳಹಿರಿಯೂರು ಹೋಬಳಿ, ಹಿರೇಬಳ್ಳೇಕೆರೆ ಗ್ರಾಮದ ಜಮೀನು ಒಟ್ಟು 01-00.00 ಎಕರೆ ಮತ್ತು ಹಿರೇನಲ್ಲೂರು ಹೊಬಳಿ, ಅರೇಹಳ್ಳಿ, ಗ್ರಾಮದ ಒಟ್ಟು 00-30.00 ಎಕರೆ ಮತ್ತು ಯಗಟಿ ಹೋಬಳಿ, ಖಂಡುಗದಹಳ್ಳಿ, ಗ್ರಾಮದ 01-02.00 ಎಕರೆ ಒಟ್ಟು 02-35.04 ಎಕರೆ**

ಸಾರ್ವಜನಿಕ ಉದ್ದೇಶದ ಸರ್ಕಾರದ ಯೋಜನೆಗಳಿಗೆ ಖಾಸಗಿ ಜಮೀನನ್ನು ಭೂಮಾಲೀಕರಿಂದ ನೇರವಾಗಿ ಖರೀದಿಸುವ ಕುರಿತು ಸರ್ಕಾರದ ಆದೇಶ ಸಂ.ಕಂಇ 54 ಭೂಸ್ವಾಳ 2014 ಬೆಂಗಳೂರು ದಿ:31-05-2016ರ ಸುತ್ತೋಲೆಯಂತೆ ಕ್ರಮಕೈಗೊಂಡು ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ಇವರ ಅಧ್ಯಕ್ಷತೆಯಲ್ಲಿ ದಿ:25/05/2025 ರಂದು ಉಪನೋಂದಣಾಧಿಕಾರಿಗಳು ಕಡೂರು ಇವರಿಂದ ಪ್ರಸ್ತಾಪಿತ ಜಮೀನುಗಳ ಕ್ರಯ ಮತ್ತು ಮಾರಾಟವಾಗಿರುವ ವಹಿವಾಟುಗಳ ಬಗ್ಗೆ ಸರ್ಕಾರಿ ಮಾರ್ಗಸೂಚಿ ಬೆಲೆಗಳ ವಿವರಗಳನ್ನು ಪಡೆಯಲಾಗಿದ್ದು ಅದರಂತೆ ಸದರಿ ಜಮೀನುಗಳ ಮಾರಾಟ/ಕ್ರಯ ವಹಿವಾಟುಗಳ ಅಂಕಿಅಂಶಗಳನ್ನು ಗಣನೆಗೆ ತೆಗೆದುಕೊಂಡು (1/2 total saledeeds)ಗಳನ್ನು ಪರಿಗಣಿಸಿ ಈ ಕೆಳಗಿನಂತೆ ಬೆಲೆ ನಿರ್ಧರಣೆ ಮಾಡಲಾಗಿರುತ್ತದೆ.

ಕ್ರ ಸಂ.	ಉದ್ದೇಶಿತ ಹನಿ ನೀರಾವರಿ ಪ್ಯಾಕೇಜ್-01ರ ಕಾಮಗಾರಿ ನಿರ್ಮಾಣ ಮಾಡಲಾಗುತ್ತಿರುವ ಗ್ರಾಮಗಳ ವಿವರ	ತರಹೆ	ಗುಂಟೆ ಒಂದಕ್ಕೆ ನಿಗದಿಪಡಿಸಿರುವ ದರ	ಎಕರೆಗೆ (ರೂ.ಗಳಲ್ಲಿ)
01	ಹಿರೇಬಳ್ಳೇಕೆರೆ	ಖುಷ್ಕಿ	7000	2,80,000
02	ಅರೇಹಳ್ಳಿ	ಖುಷ್ಕಿ	7000	2,80,000
03	ಖಂಡುಗದಹಳ್ಳಿ	ಬಾಗಾಯ್ತು	6250	2,50,000

ತೋಟ ಮತ್ತು ಗಿಡಮರಗಳ ಚರ್ಚೆ

ನೇರ ಖರೀದಿ ಒಳಪಡುವ ಜಮೀನುಗಳಲ್ಲಿ ಬರುವ ತೋಟಗಾರಿಕಾ ಬೆಳೆಗಳ ಬಗ್ಗೆ ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ಚಿಕ್ಕಮಗಳೂರು ಇವರಿಗೆ ಮೌಲ್ಯ ಮಾಪನ ಮಾಡಿ ಸಲ್ಲಿಸಲು ಸೂಚಿಸಲಾಗಿ ತೋಟಗಾರಿಕೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು ರವರ ಪತ್ರ ಸಂಖ್ಯೆ: ತೋಉನಿ/ಜಿಪಂಚಿ/ತಾಸ- 5/2024-25/162 ದಿ:03/08/2024 ಮತ್ತು ಪತ್ರ ಸಂ.340 ದಿ:15-11-2024. ರಂದು ಈ ಕಛೇರಿಗೆ ಸಲ್ಲಿಸಲಾಗಿರುತ್ತದೆ. ವರದಿಯ ಮೌಲ್ಯವನ್ನು ಐತೀರ್ಪಿನಲ್ಲಿ ಅಳವಡಿಸಿದೆ.

ಖಂಡುಗದಹಳ್ಳಿ

ಖಾತೆದಾರರ ಸಂಖ್ಯೆ	ಮೊತ್ತ
01	ರೂ.6,59,256.00

ಅರೇಹಳ್ಳಿ

ಖಾತೆದಾರರ ಸಂಖ್ಯೆ	ಮೊತ್ತ
01	15,44,191.00

ಹಿರೇಬಳ್ಳೇಕೆರೆ

ಖಾತೆದಾರರ ಸಂಖ್ಯೆ	ಮೊತ್ತ
01	ರೂ. 5,30,129.00

ಪ್ರಸಕ್ತ ಪ್ರಕರಣದಲ್ಲಿ ನೇರ ಖರೀದಿಗೆ ಒಳಪಡುವ ಜಮೀನಿನ ಪ್ರತಿ ಗುಂಟೆಗೆ ಮಾರ್ಗಸೂಚಿ ಬೆಲೆ ಹಾಗೂ ಸರಾಸರಿ ಮಾರಾಟ ಬೆಲೆ ಈ ಕೆಳಗಿನಂತೆ

ಕ್ರ ಸಂ	ಗ್ರಾಮ		ತರಹೆ	ಎಕರೆ (ರೂ.ಗಳಲ್ಲಿ)	ಗುಂಟೆ
01	ಅರೇಹಳ್ಳಿ		ಖುಷ್ಕಿ	2,80,000	7,000
02	ಹಿರೇಬಳ್ಳಕೆರೆ		ಖುಷ್ಕಿ	2,80,000	7,000
03	ಖಂಡುಗದಹಳ್ಳಿ		ಬಾಗಾಯ್ತು	2,50,000	6,250

ಮಾರುಕಟ್ಟೆ ಬೆಲೆಯ ದ್ವಿಗುಣ ಬೆಲೆ ನೀಡುವಿಕೆ

ಭೂಸ್ವಾಧೀನ ಕಾಯ್ದೆ-2013 ರ ಪರಿಶಿಷ್ಟ-01 ರ ಕ್ರಮ ಸಂ:2 ರ ಪ್ರಕಾರ ಮಾರುಕಟ್ಟೆ ಬೆಲೆಯ ದ್ವಿಗುಣ ಬೆಲೆಯನ್ನು ಸದರಿ ಪ್ರಕರಣದಲ್ಲಿ ನಿಗದಿ ಪಡಿಸಲು ಸರ್ಕಾರದ ಅಧಿಸೂಚನೆ ಸಂ:ಆರ್.ಡಿ.58 ಭೂಸ್ವಾಬೆ/2014 ದಿ:3/05/2014 ರಂತೆ ನಗರದಿಂದ ರೇಡಿಯಲ್ ಡಿಸ್ಟೆ ಅಳತೆಯಂತೆ ಮಲ್ಟಿಪ್ಲೆಲರ್‌ಫ್ಯಾಕ್ಟರ್ ನಿಯಮ ದಂತೆ ಕರಡು ಐತೀರ್ಪನ್ನು ತಯಾರಿಸಿದೆ. ಜಮೀನಿನ ಮೌಲ್ಯದ ದರಕ್ಕೆ ಅನ್ವಯಿಸುವಂತೆ ಕಡೂರು ತಾಲ್ಲೂಕು ಕೇಂದ್ರದಿಂದ **ಅರೇಹಳ್ಳಿ,ಹಿರೇಬಳ್ಳೆಕೆರೆ, ಖಂಡುಗದಹಳ್ಳಿ,** ಗ್ರಾಮಕ್ಕೆ 2.0 ರಷ್ಟು ದರ ನಿಗದಿಪಡಿಸಿದೆ.

ಕ್ರ ಸಂ	ಗ್ರಾಮದ ಹೆಸರು	ತರಹೆ	ನಿಗದಿಪಡಿಸಿದ ಜಮೀನಿನ ಮೌಲ್ಯ ಪ್ರತಿ ಗುಂಟೆಗೆ ರೂ	ಕಲಂ 26(2)ರ ಪ್ರಕಾರ ಗುಣಾಂಕ	ನಿಗದಿಪಡಿಸಿದ ಜಮೀನಿನ ಮೌಲ್ಯ ರೂ
1	ಅರೇಹಳ್ಳಿ	ಖುಷ್ಕಿ	7,000	14,000	21,000
2	**ಹಿರೇಬಳ್ಳೆಕೆರೆ**	ಖುಷ್ಕಿ	7,000	14,000	2,80,000
3	**ಖಂಡುಗದಹಳ್ಳಿ**	ಬಾಗಾಯ್ತು	6,250	12,500	2,62,500

ಭೂಸ್ವಾಧೀನ ಕಾಯ್ದೆ 2013 ರ ಕಲಂ 30 ರ ಪ್ರಕಾರ ನಷ್ಟ ಪರಿಹಾರ ಧನ(ಸೊಲೇಷಿಯಂ) ನೀಡುವಿಕೆ:

ಭೂಸ್ವಾಧೀನ ಕಾಯ್ದೆ 2013 ರ ಕಲಂ 30(1) ರಲ್ಲಿ ಸೂಚಿಸಿದಂತೆ ಭೂಸ್ವಾಧೀನ ಪ್ರದೇಶಕ್ಕೆ ನಷ್ಟ ಪರಿಹಾರ ಧನ ಶೇ.100 ರಷ್ಟು ನಿಗದಿಪಡಿಸುವಾಗ ಭೂಸ್ವಾಧೀನವಾಗುವ ಜಮೀನಿನ ಮತ್ತು ಇದಕ್ಕೆ ಲಗತ್ತಿರುವ ತೋಟದ ಒಟ್ಟು ಪರಿಹಾರದ ಮೊತ್ತವನ್ನು ದೃಢೀಕರಿಸಿರುವಾಗ ಅಂತಿಮತೀರ್ಪನ್ನು ಹೊರಡಿಸುವುದಕ್ಕಾಗಿ ಪರಿಹಾರ ಮೊತ್ತಕ್ಕೆ ಸಮನಾದ ಶೇ.100ರ ಹೆಚ್ಚುವರಿ ಮೊತ್ತವನ್ನು ನಿಗದಿಪಡಿಸಬೇಕಾಗಿರುತ್ತದೆ. ಆದರೆ ನೇರ ಖರೀದಿಗೆ ಒಳಪಡುವ ಜಮೀನಿನಲ್ಲಿ ಯಾವುದೇ ಕಟ್ಟಡಗಳು, ಅರಣ್ಯ ಮರಗಳು ಇರುವುದಿಲ್ಲ.

ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾದರ ನಿರ್ಧರಣಾ ಸಲಹಾ ಸಮಿತಿಯ ಸಭೆಯಂತೆ ಬೆಲೆಯನ್ನು ನಿರ್ಧರಿಸಲಾಗಿದೆ. ಭೂಸ್ವಾಧೀನಗೊಳ್ಳುವ ಜಮೀನಿನಲ್ಲಿ ತೋಟಗಾರಿಕಾ ಬೆಳೆಗಳು ಮತ್ತು ಕೊಳವೆ ಬಾವಿ ಮಾತ್ರ ಭೂಸ್ವಾಧೀನವಾಗಿರುತ್ತದೆ. ಜಮೀನಿನ ಮೌಲ್ಯ, ಸೊಲೇಷಿಯಂ ಸೇರಿ ಪರಿಹಾರಧನದ ಐತೀರ್ಪನ್ನು ಈ ಕೆಳಕಂಡ ಪರಿಹಾರಾರ್ಥಿಗಳಿಗೆ ಬ್ಯಾಂಕ್ ಖಾತೆಗೆ ಪಿ.ಡಿ ಖಾತೆ ಮೂಲಕ ಪರಿಹಾರಧನವನ್ನು ಪಾವತಿಸಲಾಗಿದೆ.

ಕ್ರ. ಸಂ	ವಿವರಗಳು			
ಭದ್ರಾ ಮೇಲ್ದಂಡೆ ಯೋಜನೆಯ ತುಮಕೂರು ಶಾಖಾ ಕಾಲುವೆಯ ಹನಿ ನೀರಾವರಿ ಪ್ಯಾಕೇಜ್-01ರ ಕಾಮಗಾರಿಗಾಗಿ ನೇರ ಖರೀದಿ ಪ್ರಸ್ತಾವನೆ ಪ್ರಕರಣದ ಕ್ರಮಾಂಕ				
1	ಖಾತೆದಾರರ ಹೆಸರು	ಪರಮೇಶ್ವರಪ್ಪ ವೈ.ಜಿ ಬಿನ್ ಲೇಟ್ ಗೋವಿಂದಪ್ಪ	ಬದರಿನಾಥ್ ಪಿ. ಬಿನ್ ವಿ. ಪಾಂಡು	ಜೋಸೆಫ್ ಪಿ. ಬಿನ್ ಪಿ. ರಾಜರತ್ನಂ
2	ಗ್ರಾಮ	ಖಂಡುಗದಹಳ್ಳಿ	ಅರೇಹಳ್ಳಿ	ಹಿರೇಬಳ್ಳೇಕೆರೆ
3	ಸರ್ವೆ ನಂ.	5/2 & 5/3	50/12	72/8
4	ಭೂಸ್ವಾಧೀನ ವಿಸ್ತೀರ್ಣ	1ಎ-02ಗು	0-30 ಎ-ಗುಂ	1 ಎಕರೆ
5	ತರಹೆ	ಬಾಗಾಯ್ತು	ಖುಷ್ಕಿ	ಖುಷ್ಕಿ
6	ನಿಗದಿ ಪಡಿಸಿದ ದರ	ರೂ. 6250.00	ರೂ.7000.00	ರೂ.7000.00
7	ಜಮೀನಿನ ಮೌಲ್ಯ	42*6250= ರೂ.2,62,500.00	30*7000= ರೂ 21000.00	40*7000= ರೂ. 2,80,000.00
8	ಭೂಸ್ವಾಧೀನ ಕಾಯ್ದೆಯಂತೆ ಗುಂಟೆ 1ಕ್ಕೆ ದರ (2 ಪಟ್ಟು ದರ)	6250*2=ರೂ.12500.00 42*12500= ರೂ.5,25,000.00	7000*2=ರೂ. 14000 30*14000= ರೂ. 4,20,000.00	7000*2=ರೂ. 14,000.00 40*14000= ರೂ. 5,60,000.00
9	ತೋಟಗಾರಿಕೆ ಬೆಳೆಗಳ ಮೌಲ್ಯ	ರೂ.6,59,256.00	ರೂ. 15,44,191.00	ರೂ. 5,30,129.00
10	ಕೊಳವೆಬಾವಿಯ ಮೌಲ್ಯ	ರೂ.1,33,099.00	ರೂ. 1,79,780.00	ರೂ. 2,41,980.00
11	ಒಟ್ಟು (9+10+11)	ರೂ.13,17,355.00	ರೂ. 21,43,971.00	ರೂ. 13.32.109.00
12	ಕ್ರಮ ಸಂಖ್ಯೆ 11 ಕ್ಕೆ ಸೊಲೇಷಿಯಂ ಶೇ.100	ರೂ.13,17,355.00	ರೂ. 21,43,971.00	ರೂ. 13.32.109.00
13	ಒಟ್ಟು ಮೊತ್ತ (11+12)	**ರೂ. 26,34,710.00**	**ರೂ. 42,87,942.00**	**ರೂ. 26,64,218.00**
ಒಟ್ಟು ಪರಿಹಾರ ಮೊತ್ತ **ರೂ.95,86,870/-**				
ಟೋಕನ್ ಸಂಖ್ಯೆ		2513394452 (ಸ,ನಂ 5/3) 2513394460 (ಸ,ನಂ.5/2)	2513394441	2513394472
ಪಾವತಿಸಿದ ದಿನಾಂಕ		18/10/2025	05/11/2025	18/10/2025

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without preayment WPP No. 297

ವ್ಯವಸ್ಥಾಪಕ ನಿರ್ದೇಶಕರು, ವಿ.ಜ.ನಿ.ನಿ, ಬೆಂಗಳೂರು ರವರ ಪತ್ರ ಸಂಖ್ಯೆ: ಸಿಎಓ/ಭೂಸ್ವಾ/ಸಿಆರ್/12/25-26/211/212/213 ದಿ:11-06-2025ರ ಪತ್ರಗಳಂತೆ ಅರೇಹಳ್ಳಿ, ಹಿರೇಬಳ್ಳೆಕೆರೆ ಮತ್ತು ಖಂಡುಗದಹಳ್ಳಿ ಸೇರಿ ರೂ.96 ಲಕ್ಷಗಳನ್ನು ಭದ್ರಾ ಮೇಲ್ದಂಡೆ ಯೋಜನೆಯ ತುಮಕೂರು ಶಾಖಾ ಕಾಲುವೆಯ ಹನಿ ನೀರಾವರಿ ಪ್ಯಾಕೇಜ್-01 ಕಾಮಗಾರಿಗಾಗಿ ವೆಚ್ಚ ಭರಿಸಿರುತ್ತಾರೆ. ಒಟ್ಟು ಅವಾರ್ಡ್ ಮೊತ್ತ **ರೂ. 95,86,870/-(ತೊಂಭತ್ತೈದು ಲಕ್ಷದ ಎಂಭತ್ತಾರು ಸಾವಿರದ ಎಂಟು ನೂರಾ ಎಪ್ಪತ್ತು)ರೂ.ಗಳ ಪರಿಹಾರಧನವನ್ನು ಪಾವತಿಸಲಾಗಿರುತ್ತದೆ.** ಈ ನಿರ್ಣಯವನ್ನು ದಿನಾಂಕ:13/11/2025ರಂದು ಉಕ್ತಲೇಖನ ನೀಡಿ, ಬೆರಳಚ್ಚಾದ ನಂತರ, ತಪ್ಪುಗಳನ್ನು ತಿದ್ದುಪಡಿ ಮಾಡಿ, ರುಜು ಮಾಡಿರುತ್ತೇನೆ.

ಉಪವಿಭಾಗಾಧಿಕಾರಿ ಹಾಗೂ ಭೂಸ್ವಾಧೀನಾಧಿಕಾರಿ
ತರೀಕೆರೆ ಉಪವಿಭಾಗ, ತರೀಕೆರೆ.

PR-31

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಮೈಸೂರು.

VIJAY NELAMANGALA MUNIDALAPPA

Digitally signed by VIJAY NELAMANGALA MUNIDALAPPA
DN: c=IN, o=E-PROCUREMENT CELL CEG, 2.5.4.20=588b7cb39aa23bf0439612318656695,29a569e29a28073a76837bb2ab2b21141, postalCode=560001, st=Karnataka, serialNumber=f8f88b8f2f6205fdbf4221204fc1e04f3323d5c514a0b37a1Sda5a4006dbc86019, cn=VIJAY NELAMANGALA MUNIDALAPPA
Date: 2026.02.11 17:18:19 +05'30'